ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 3 ಜನವರಿ 18, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಸಿ. ಪಿ. ಐ. (ಎಂ) ನ ಪಾಲಿಟ್‌ಬ್ಯೂರೋ ಪ್ರಕಟಣೆ

ಛಿದ್ರಕಾರಿ ಶಕ್ತಿಗಳಿಂದ ಹೆಚ್ಚುತ್ತಿರುವ ಬೆದರಿಕೆ

ಛಿದ್ರಕಾರಿ ಶಕ್ತಿಗಳ ಮತ್ತು ಭಯೋತ್ಪಾದಕರಿಂದ ದಿನನಿತ್ಯ ಬೆದರಿಕೆ ಹೆಚ್ಚಾಗುತ್ತಿದೆಂದೂ, ರಾಷ್ಟ್ರವನ್ನು ವಿಭಜನೆಗೊಳಿಸುವಂಥ ಆ ಶಕ್ತಿಗಳ ವಿರುದ್ಧ ಕ್ರಮ ತೆಗೆದು ಕೊಳ್ಳದೆ ಆಳುವ ಕಾಂಗ್ರೆ ಪಕ್ಷ ಹಾಗೂ ಕೇಂದ್ರ ಸರಕಾರ ತಮ್ಮ ಸಂಕುಚಿತ ಅಲ್ಪ ಹಿತಕ್ಕಾಗಿ ಆ ಶಕ್ತಿಗಳನ್ನು ಸಮಾಧಾನ ಪಡಿಸುತ್ತಿದೆಂದು ದೇಶದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸುತ್ತಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಜನೇವರಿ 6, 7 ರಂದು ಸೇರಿದ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಮಾಡಿದೆ. ಕೆಲವು ವಿರೋಧ ಪಕ್ಷಗಳು ಕೂಡ ಸಂದರ್ಭಸಾಧಕ ನೀತಿಯನ್ನನುಸರಿಸಿ ಅಂಥ ಶಕ್ತಿಗಳನ್ನು ಬೆಂಬಲಿಸುತ್ತಿವೆಂದೂ, ದೇಶದ ಐಕ್ಯತೆಯನ್ನು ಕಾಪಾಡುವ ಸಲುವಾಗಿ ಎಲ್ಲ ದೇಶಪ್ರೇಮಿ ಮತ್ತು ಜಾತ್ಯಾತೀತ ಶಕ್ತಿಗಳು ಅಂಥ ವಿಚಾರ ಸರಣಿಯ ವಿರುದ್ಧ ಹೋರಾಡಬೇಕೆಂದೂ ಪಿ.ಬಿ. ಕರೆ ನೀಡಿದೆ.

ಪಂಜಾಬ್ ಸಮಸ್ಯೆಗೆ ಕೇಂದ್ರವೇ ಜವಾಬ್ದಾರಿ

ರಾಜೀವ್ - ಲೋಂಗೋವಾಲ್ ಒಪ್ಪಂದವನ್ನು ಜ್ಯಾರಿಗೆ ತರುವುದರಲ್ಲಿ ಕೇಂದ್ರ ಸರಕಾರ ವೈಫಲ್ಯ ಅದರ ಲಾಭ ಪಡೆದು ಹಿಂಸಾಕೃತ್ಯದಲ್ಲಿ ತೊಡಗಿರುವ ಪ್ರತ್ಯೇಕತಾವಾದಿ ಮತ್ತು ಭಯೋತ್ಪಾದಕ ಶಕ್ತಿಗಳ ವಿರುದ್ಧ ಸಮರ್ಪಕವಾದ ಕ್ರಮ ತೆಗೆದುಕೊಳ್ಳುವುದಕ್ಕೆ ಬರ್ನಾಲ ಸರಕಾರದ ಕೈಗಳನ್ನು ಶಿಥಿಲಗೊಳಿಸುತ್ತಿದೆಂದೂ ಪಿ. ಬಿ. ಆರೋಪಿಸಿದೆ. ಬರ್ನಾಲ ಸರಕಾರ ಸಬಲವಾಗಿಲ್ಲದ್ದರಿಂದಲೇ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿ (ಎಸ್.ಪಿ.ಜೆ.ಸಿ.) ಯ ಚುನಾವಣೆಯಲ್ಲಿ ಭಿನ್ನಾಭಿಪ್ರಾಯದ ಅಕಾಲಿ ಗುಂಪು ಗೆಲ್ಲಲು ಸಾಧ್ಯವಾಗಿದೆ. ಆ ಒಪ್ಪಂದದ ಭಿನ್ನಾಭಿಪ್ರಾಯವಿಲ್ಲದ ಅಂಶಗಳನ್ನು ಕೂಡಲೇ ಜ್ಯಾರಿಯಲ್ಲಿ ತಂದು, ಅದೇ ಸಮಯದಲ್ಲಿ ಜೋಧಪೂರ ಜೈಲಿನಲ್ಲಿ ಬಂಧಿತರಾಗಿರುವ ನಿರಪರಾಧಿಗಳನ್ನು ಬಿಡುಗಡೆ ಮಾಡುವಂಥ ಕ್ರಮಗಳನ್ನು ಕೈಗೊಳ್ಳಬೇಕೆಂದೂ, ಭಾರತ–ಪಾಕಿಸ್ತಾನ ಗಡಿಯಲ್ಲಿ ರಕ್ಷಣ ಕ್ರಮ ಕೈಗೊಳ್ಳಬೇಕೆಂದೂ, ಅದರ ಜೊತೆಯಲ್ಲಿಯೇ ಕಾಂಗ್ರೆಸ್ ಮತ್ತು ಅಕಾಲಿ ಪಕ್ಷಗಳು ದೇಶದ ಇತರ ರಾಜಕೀಯ ಪಕ್ಷಗಳ ಜೊತೆ ಸೇರಿ ಭಯೋತ್ಪಾದಕರ ಮತ್ತು ಪಾಕಿಸ್ತಾನದಿಂದ ಪಂಜಾಬಿಗೆ ನುಸುಳುತ್ತಿರುವವರ ವಿರುದ್ಧ ಚಳುವಳಿ ಹೂಡಲು ಮುಂದೆ ಬರಬೇಕೆಂದೂ, ಪಿ. ಬಿ. ಕರೆ ನೀಡಿದೆ. ಈ ಭಯೋತ್ಪಾದಕರ ಚಟುವಟಿಕೆಗಳನ್ನು ಹತ್ತಿಕ್ಕಲು ಪಂಜಾಬಿನಲ್ಲಿ ಭದ್ರತಾ ಪಡೆಗಳು ಕಷ್ಟಕರವಾದ ಪರಿಸ್ಥಿತಿಯಲ್ಲಿ ನಡೆಸಿರುವ ಸೇವೆಯನ್ನು ಪಿ. ಬಿ. ಪ್ರಶಂಸಿಸಿದೆ. ಅದೇ ಸಮಯದಲ್ಲಿ ಛಿದ್ರಕಾರಿಗಳಿಗೆ ಅನುಕೂಲಕರವಾಗಬಹುದಾದ ರೀತಿಯಲ್ಲಿ ನಿರಪರಾಧಿ ನಾಗರೀಕರ ಮೇಲೆ ನಡೆಯುತ್ತಿರುವ ಅತಿರೇಕಗಳ ಕುರಿತು ಅಸಮಾಧಾನ ವ್ಯಕ್ತಮಾಡಿದೆ.

ತ್ರಿಪುರದಲ್ಲಿ ಟಿ. ಎನ್. ವಿ. ಭಯೋತ್ಪಾದಕತೆ

ತ್ರಿಪುರದಲ್ಲಿ ತ್ರಿಪುರ ನಾಷನಲ್ ವಾಲಂಟಿಯರ್ಸ್ (ಟಿ. ಎನ್. ವಿ.) ನಡೆಸಿರುವ ಅಪಾರ ಹತ್ಯಾಕಾಂಡದ ಕುರಿತು ಪಿ. ಬಿ. ತನ್ನ ಅತೀವ ಚಿಂತನೆ ವ್ಯಕ್ತ ಮಾಡಿದೆ. ಈ ಮಾರಣಹೋಮದ ಜವಾಬ್ದಾರಿಯನ್ನು ತ್ರಿಪುರದ ಎಡರಂಗ ಸರಕಾರದ ಮೇಲೆ ಹೊರಿಸುತ್ತಿವೆ ಕಾಂಗ್ರೆ ಪಕ್ಷ ಮತ್ತು ಕೇಂದ್ರ ಸರಕಾರ.

ಈ ಆರೋಪದಲ್ಲಿ ಹುರುಳಿಲ್ಲ. ಭಯೋತ್ಪಾದಕರಿಗೆ ರಾಜಕೀಯ ಬೆಂಬಲವಿಲ್ಲೆಂಬುದನ್ನು ಇತ್ತೀಚೆಗೆ ನಡೆದ ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಎಡರಂಗದ ವಿಜಯ ತೋರಿಸಿಕೊಟ್ಟಿದೆ. ಮುಂಚಿನಂತೆಯೇ ಈ ಚುನಾವಣೆಯಲ್ಲಿ ಕೂಡ ಕಾಂಗ್ರೆ ಟಿ ವಿ ಎನ್ ಭಯೋತ್ಪಾದಕರ ಕೂಡ ನಿಕಟ ಸಂಬಂಧ ಇರುವ ಟಿ. ಯು. ಜೆ. ಎಸ್. ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿತ್ತು. ಕಾಂಗ್ರೆ–ಟಿ. ಯು. ಜೆ.ಎಸ್.ನ ಬೆಂಬಲವಿಲ್ಲದಿದ್ದಲ್ಲಿ ಟಿ ಎನ್ ವಿ ಚಟುವಟಿಕೆ ಅಡಗಿ ಹೋಗುತ್ತಿತ್ತೆಂಬುದನ್ನು ಈ ಮುಂಚೆ ನಡೆದ ಶಾಸನ ಸಭೆ ಮತ್ತು ಅಟೋನೋಮಸ್ ಟ್ರೈಬಲ್ ಕೌನ್ಸಿಲ್ ಚುನಾವಣೆಗಳು ತೋರಿಸಿಕೊಟ್ಟಿವೆ. ಜನಬೆಂಬಲ ಇಲ್ಲದ್ದರಿಂದ ಟಿ ಎನ್ ವಿ ಗಡಿಯಾಚೆಯ ವಿದೇಶಿಯರ ಬೆಂಬಲ

(8ನೇ ಪುಟ ನೋಡಿ)

ತ್ರಿಪುರ ಚುನಾವಣೆ ಫಲಿತಾಂಶ

ಛಿದ್ರಕಾರಿಗಳ ಹಾವಳಿಯ ನಡುವೆಯೇ ತ್ರಿಪುರ ಗ್ರಾಮ ಪಂಚಾಯತ್ ಉಪಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪ್ರಚಂಡ ಬಹುಮತ ಪಡೆದಿದೆ. ಒಟ್ಟು 167 ಸ್ಥಾನಗಳ ಪೈಕಿ ಸಿಪಿಐ (ಎಂ) 104 ಸ್ಥಾನಗಳನ್ನು ಗೆದ್ದಿದೆ.ಕಾಂಗ್ರೆಗೆ 34,ಟಿ.ಯು.ಜೆ.ಎಸ್. ಗೆ 14. ಸ್ವತಂತ್ರರಿಗೆ 15 ಸ್ಥಾನ ಸಿಕ್ಕಿದೆ. 104 ರ ಪೈಕಿ ಸಿ. ಪಿ. ಐ. (ಎಂ) 14 ಸ್ಥಾನಗಳನ್ನು ಅವಿರೋಧವಾಗಿ ಪಡೆದಿದೆ.

ಮುಂಬರುವ ವಿಧಾನಸಭೆ ಚುನಾವಣೆಗೆ ಈ ಪರಿಣಾಮ ದಿಕ್ಸೂಚಿಯಾಗಿದೆಂದು ಜನರ ಅಭಿಪ್ರಾಯ.

ತ್ರಿಪುರದಲ್ಲಿರುವ ಸಿ. ಪಿ. ಐ. (ಎಂ) ಮುಖಂಡತ್ವದ ಎಡರಂಗ ಸರಕಾರದ ವಿರುದ್ಧ ಕಾಂಗ್ರೆ, ತ್ರಿಪುರ ಉಪಜಾತಿ ಜೂಬ ಸಮಿತಿ (ಟಿ ಯು ಜೆ ಎಸ್) ಹಾಗೆಯೇ ಬಂಗ್ಲಾ ದೇಶದಲ್ಲಿ ಶಸ್ತ್ರ ತರಬೇತಿ ಪಡೆದ ಟಿಎನ್‌ವಿ ಉಗ್ರಗಾಮಿಗಳು ಸತತ ಅಪಪ್ರಚಾರ ನಡೆಸುತ್ತಿದ್ದರೂ ಕೂಡ ಜನತೆ ಸಿ. ಪಿ. ಐ. (ಎಂ) ಪ್ರತಿನಿಧಿಗಳನ್ನು ಬಹುಮತದಿಂದ ಆರಿಸಿರುವುದು ತ್ರಿಪುರಾದ ನೃಪೇನ್ ಚಕ್ರವರ್ತಿಯವರ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜನಪ್ರಿಯತೆಯನ್ನು ತೋರಿಸುತ್ತದೆ.

ನೇರಕ್ರಮ ಅಪಾಯಕಾರಿ

ದಿಲ್ಲಿಯಲ್ಲಿ ಸೇರಿದ್ದ ಬಬ್ರಿ ಮಸ್‌ಜೀದ ಸಮಾವೇಶವು ಬಬ್ರಿ ಮಸ್‌ಜೀದನ್ನು ಹಿಂದುಗಳ ಆಕ್ರಮಣದಿಂದ ರಕ್ಷಿಸಲು ನೇರ ಕ್ರಮ ಕೈಗೊಳ್ಳುವ ನಿರ್ಣಯ ಕೈಗೊಂಡಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪಿ ಬಿ. ಗಂಭೀರವಾಗಿ ಪರಿಗಣಿಸಿದೆ. ಆ ಪ್ರದೇಶ "ರಾಮ ಜನ್ಮ ಭೂಮಿ" ಆಗಿರುವುದರಿಂದ ಅದನ್ನು ರಕ್ಷಿಸಬೇಕೆಂದು ಹಿಂದು ಜಾತೀಯವಾದಿಗಳು ಕೆಲವು ತಿಂಗಳ ಹಿಂದೆ ಕರೆ ಕೊಟ್ಟಿದ್ದರು. ಆ ಪ್ರದೇಶದ ಕುರಿತು ಹಿಂದೂ–ಮುಸಲ್ಮಾನ ಎರಡೂ ಜಾತಿಗಳಲ್ಲಿ ತೀವ್ರ ಅಸಮಾಧಾನ ಉಂಟಾಗಿದೆ. ಜಮಾಯತೆ ಇಸ್ಲಾಮಿ, ಮುಸ್ಲಿಂಲೀಗ್ ಒಂದು ಕಡೆ, ವಿಶ್ವ ಹಿಂದೂ ಪರಿಷತ್ ಹಾಗೆಯೇ ಬಿ ಜೆ ಪಿ ಮೊದಲಾದ ಹಿಂದೂ ಜಾತೀಯವಾದಿಗಳು ಮತ್ತೊಂದು ಕಡೆ ಜಾತಿಯ ಪ್ರಕ್ಷೋಭೆ ಎಬ್ಬಿಸುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ. ಉತ್ತರ ಪ್ರದೇಶದ ಕಾಂಗ್ರೆ ಸರ್ಕಾರ ಈ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸುವ ಕ್ರಮ ಕೈಗೊಳ್ಳದೆ ಹಿಂದೂ ಜಾತೀಯವಾದಿಗಳ ಒತ್ತಡಕ್ಕೆ ಬಲಿಯಾಗಿದೆ.

ಈಗ ಬಬ್ರಿ ಮಸ್‌ಜೀದ ಸಮಾವೇಶ, ಬಬ್ರಿ ಮಸ್‌ಜೀದಿನ ಸಮಸ್ಯೆಯನ್ನು ಸರ್ಕಾರ ಬಗೆಹರಿಸದಿದ್ದರೆ ಜನೇವರಿ 26ರ ಗಣರಾಜ್ಯೋತ್ಸವವನ್ನು ಬಹಿಷ್ಕರಿಸಬೇಕೆಂದು ಮುಸ್ಲಿ ಜನತೆಗೆ ಕರೆ ಕೊಟ್ಟಿದೆ. ಅದು ಬಹಳ ಅಪಾಯಕಾರಿ. ಜನತಾ ಪಕ್ಷದ ಲೋಕಸಭೆ ಸದಸ್ಯರಾದ ಸಯ್ಯದ್ ಶಹಾಬುದ್ದೀನ್ ಬಬ್ರಿಮಸ್‌ಜೀದ ಹೋರಾಟ ಸಮನ್ವಯ ಸಮಿತಿಯ ಕಾರ್ಯದರ್ಶಿಯಾಗಿದ್ದು ದೇಶದ ಬಹಳಷ್ಟು ಮುಸ್ಲಿಂ ಸಂಘಸಂಸ್ಥೆಗಳೂ, ವಿಚಾರವಾದಿಗಳೂ ಈ ಕರೆಯನ್ನು ವಿರೋಧಿಸುತ್ತಿದ್ದರೂ ತನ್ನ ನಿಲುಮೆಗೆ ಅವರು ಅಂಟಿಕೊಂಡಿದ್ದಾರೆ.

ಜಾತಿ ದ್ವೇಷ ಬೆಳೆಸುವ ಕಾರ್ಯದಲ್ಲಿ ಅವರು ಮಗ್ನರಾಗಿದ್ದರೂ ಕೂಡ ಜನತಾ ಪಕ್ಷ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಕಾಂಗ್ರೆ ಹಾಗೆಯೇ ಜನತಾ ಪಕ್ಷ ಕೂಡ ತೋರಿಕೆಗಾಗಿ ಜಾತ್ಯಾತೀತತೆಯನ್ನು ಪ್ರತಿಪಾದಿಸುತ್ತಿದ್ದರೂ ಕೂಡ ಮುಸಲ್ಮಾನರ ಮತ ಬೆಂಬಲ, ಕಳೆದುಕೊಳ್ಳಬಹುದೆಂಬ ಕೀಳ್ಮಟ್ಟದ ಆಸೆಯಿಂದ ಕಟ್ಟಾ ಜಾತಿವಾದಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲು ಹಿಂಜರಿಯುತ್ತಿದೆ. ಕಾಂಗ್ರೆಸ್ ಈ ಸಮಸ್ಯೆಯ ಪರಿಹಾರಕ್ಕೆ ತುರ್ತು ಕ್ರಮ ತೆಗೆದುಕೊಳ್ಳಲಿಕ್ಕೆ ಹಿಂದೇಟು ಹಾಕುತ್ತಿದೆ.

ಇಂಥ ಸೂಕ್ಷ್ಮ ಸಮಸ್ಯೆಗಳಲ್ಲಿ ಜಾತೀವಾದಿಗಳು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ಕೆಡಿಸುತ್ತಾರೆ. ವಿಚಾರವಂತರು, ಜಾತ್ಯಾತೀತ ಶಕ್ತಿಗಳೆಲ್ಲ ಒಟ್ಟುಸೇರಿ ಎರಡೂ ಜಾತಿಯವರನ್ನು ಕಟ್ಟಾ ಜಾತಿ ಅಭಿಮಾನಿಗಳಿಂದ ಪ್ರತ್ಯೇಕಿಸಿ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಲು ಸಹಾಯ ಮಾಡಿ ದೇಶದಲ್ಲಿ ಜಾತೀಯ ಸೌಹಾರ್ದತೆ, ಐಕ್ಯತೆಯನ್ನು ಕಾಪಾಡಲಿಕ್ಕೆ ಶ್ರಮಿಸುವುದು ಅಗತ್ಯ. ಇಂಥ ಸಮಸ್ಯೆಗಳು ಸಾಮ್ರಾಜ್ಯಶಾಹಿಗಳಿಗೆ, ಛಿದ್ರಕಾರಿಗಳಿಗೆ ಆಹಾರವಾಗಿ ಒದಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ದೇಶಪ್ರೇಮಿಯ ಕರ್ತವ್ಯವಾಗಿದೆ.

ಸಾಂಸ್ಕೃತಿಕ ರಂಗ 86

– ಜಿ. ಎನ್. ಮೋಹನ್

"86 ರ ಕನ್ನಡ ರಂಗಭೂಮಿಗೆ ಕಂಡದ್ದೇನು ಎಂದು ಕಣ್ಣು ಹೊರಳಿಸಿದರೆ ನಿರಾಶದಾಯಕವಾದ ಉತ್ತರ ಸಿಗುತ್ತದೆ. ಕನ್ನಡ ರಂಗಭೂಮಿಗೆ 86 ಅತ್ಯಂತ ನಿರಾಶದಾಯಕವಾದ ವರ್ಷ. 84-85ರ ಅಬ್ಬರದ ಮತ್ತು ಹಲವು ಗಟ್ಟಿತನದ ಪ್ರಯೋಗಗಳನ್ನು ನೀಡಿದಲ್ಲದೇ ಒಡಲಾಳ, ತಾಯಿ, ಎರಡು ಜನಪದ ನಾಟಕಗಳ ಉತ್ಸವ ಕಂಡಿದ್ದ ರಂಗಭೂಮಿ ಇಂದು ಅತ್ಯಂತ ಪೇಲವವಾಗಿದೆ.

ಸಮುದಾಯಕ್ಕೆ ಹತ್ತು ವರ್ಷ

ರಂಗಮಾಧ್ಯಮದಲ್ಲಿ ಪ್ರಗತಿ ಪರ ಯೋಜನೆಗಳಿಗೆ "ನೋಟ" ದ ಅಂಶ ಸೇರಿಸಿ ಒಂದು ಗಟ್ಟಿರೂಪು ಕೊಡಲು ಪ್ರಯತ್ನಿಸುತ್ತಿರುವ ಸಮುದಾಯ 85ರ ಅಂಚಿನಲ್ಲಿ ತನ್ನ ದಶಮಾನೋತ್ಸವದ ಅಂಗವಾಗಿ ನಾಲ್ಕು ನಾಟಕಗಗಳನ್ನು ಅಭಿನಯಿಸಿತು. ಹುತ್ತವ ಬಡಿದರೆ, ತಾಯಿ, ಗೆಲಿಲಿಯೋ, ಕತ್ತಲೆ ದಾರಿ ದೂರ, ಬೆಲ್ಚಿ, ಪತ್ರೆ ಸಂಗಪ್ಪನ ಕೊಲೆ, ಪಂಚತಾರ, ಮ್ಯಾಕ್‌ಬೆತ್ ನಾಟಕಗಳ ಮೂಲಕ ಮತ್ತು ಅತ್ಯಂತ ಯಶಸ್ವಿ ಎರಡು ಸಾಂಸ್ಕೃತಿಕ ಜಾತಾಗಳ ಮೂಲಕ ಹಳ್ಳಿಯ ಮೂಲೆ ಮೂಲೆಗಳನ್ನು ಮುಟ್ಟಿದ್ದ "ಸಮುದಾಯ" ಇಂದು ಕನ್ನಡದ ಅತ್ಯಂತ ಮಹತ್ವದ ರಂಗ ಸಂಘಟನೆ. ಕರ್ನಾಟಕದಾದ್ಯಂತ 22 ರಂಗ ಘಟಕಗಳನ್ನು ಹೊಂದಿರುವ ಸಮುದಾಯ 86ನ್ನು ಬೆಂಗಳೂರಿನಲ್ಲಿ ಗಟ್ಟಿಯಾಗುತ್ತಿದ್ದ ರಂಗ ಚಟುವಟಿಕೆಗಳನ್ನು ವಿಕೇಂದ್ರಿಕರಿಸಿ ಇತರೇ ಜಿಲ್ಲೆಗಳಲ್ಲೂ ನಾಟಕವನ್ನು ಒಯ್ಯಲು ಅತ್ಯಂತ ಸಮರ್ಪಕವಾಗಿ ಬಳಸಿಕೊಂಡಿದೆ.

ಸಿ. ಬಸವಲಿಂಗಯ್ಯ ಈ ರಂಗ ವಿಕೇಂದ್ರೀಕರಣದ ಉಸಿರು. ಈಗಾಗಲೇ ರಾಯಚೂರು, ಬಳ್ಳಾರಿ, ಬೀದರ್ ಗುಲಬರ್ಗಾ ಜಿಲ್ಲೆಗಳಲ್ಲಿ ಏಕಲವ್ಯ ಒಂದು ಲೋಕ ಕಥೆ, ಈರೋಬಿ, ಗೋದಾನ, ಕೆರೆಗೇಹಾರ, ಜೋಗತಿ ಕಲ್ಲು, ಅಲಮನ ಅದ್ಭುತ ನ್ಯಾಯ ನಾಟಕಗಳನ್ನು ನಿರ್ದೇಶಿಸಿದ್ದಾರಲ್ಲದೆ, ಸ್ಥಳೀಯವಾಗಿ ರಂಗತಂಡವನ್ನು ಗಟ್ಟಿಗೊಳಿಸುವ ದಿಕ್ಕಿನಲ್ಲಿ ಯಶಸ್ವಿಯಾಗಿ ಹೆಜ್ಜೆಯಿಟ್ಟಿದ್ದಾರೆ.

ಇದಲ್ಲದೆ ಸಮುದಾಯ ಪ್ರತಿವರ್ಷವೂ ಇತರೆ ತಂಡಗಳಿಗಿಂತ ಭಿನ್ನವಾಗಿ ರಂಗಜಾತಾವನ್ನು ಹಮ್ಮಿಕೊಂಡಿದೆ. ಇಂದು ತುರ್ತು ಸಮಸ್ಯೆಗಳ ಬಗ್ಗೆ ಕ್ಷಕಿರಣ ಬೀರುವ ನಾಟಕಗಳು, ಹಾಡುಗಳನ್ನೊಳಗೊಂಡ ತಂಡ ಇಡೀ ಕರ್ನಾಟಕದಾದ್ಯಂತ ಸಂಚರಿಸಿವೆ. ಆದರೆ ಈ ಭಾರಿ ಕಲೆಯೊಂದಿಗೆ ಕೈಕುಲುಕಿ ವಿಶ್ವಸಂಸ್ಥೆ 1986 ನ್ನು ಶಾಂತಿ ವರ್ಷವೆಂದು ಘೋಷಿಸಿದ್ದರ ಹಿನ್ನೆಲೆಯಲ್ಲಿ ದಾವಣಗೆರೆಯ ಸೊಲಬಕ್ಕನವರ್ ಮತ್ತು ಕರಿರಾಜು ರಚಿಸಿದ 120 ಅಡಿಗಳ ಬೃಹತ್ ವರ್ಣ ಚಿತ್ರವನ್ನು "ನೂರು ಅಡಿ ಬಣ್ಣಗಳ ನಡೆ ಅಣು ಸಮರಕ್ಕೆ ಜನತೆಯ ತಡೆ" ಎಂಬಹೆಸರಿನಲ್ಲಿ ಕರ್ನಾಟಕದಾದ್ಯಂತ ಸಂಚರಿಸಿತು. ಈ ವರ್ಣ ಚಿತ್ರವನ್ನು ಎಸ್. ಎಫ್.ಐ. ನ ರಾಷ್ಟ್ರ ಸಮ್ಮೇಳದಲ್ಲೂ ಪ್ರದರ್ಶಿಸಲಾಗಿದ್ದು ವಿಶೇಷ ಬಹುಮಾನ ದೊರಕಿದೆ.

ತಿರುಗಾಟ ತರಂಗ

ಸಮುದಾಯದ ನಾಲ್ಕು ನಾಟಕಗಳ ದಶಮಾನೋತ್ಸವ ಮುಗಿಯುತ್ತಿದ್ದಂತೆ ನೀನಾಸಂನಂತ ತಿರುಗಾಟ ಬೆಂಗಳೂರಿನಲ್ಲಿಯೇ ಅಲ್ಲದೆ ನಗರ ಕೇಂದ್ರಗಳಲ್ಲಿ ತನ್ನ ರಂಗ ತಿರುಗಾಟವನ್ನು ಹಮ್ಮಿಕೊಂಡಿತ್ತು. ಫೋರ್ಡ್‌ಫೌಂಡೇಶನ್ಸ್ ಧನಸಹಾಯದೊಂದಿಗೆ ಅಸ್ಥಿತ್ವಕ್ಕೆ ಬಂದಿದ್ದ ಈ ನೀನಾಸಂನ ಮತ್ತೊಂದು ಯೋಜನೆ "ಜನಸ್ಪಂದನ" ತನ್ನ ಎರಡು ವರ್ಷದ ಅವಧಿ ಮುಗಿಸುತ್ತಿದ್ದಂತೆಯೇ ಸುಮ್ಮನೆ ತಿರುಗಾಟ ಮಾಡುತ್ತಿದ್ದೇವೆ ಎಂಬ ಹೆಸರಿನಲ್ಲಿ ರಂಗಯಾತ್ರೆ ನಡೆಸುತ್ತಿರುವ ಈ ತಿರುಗಾಟ ಹಿಂದೆ ಬುಡಕಟ್ಟು ಜನಾಂಗಗಳಿಗೆ ನಾಟಕ ಕಲಿಸುವ ಉದ್ದೇಶ ಎಂಬಂತೆ ಸಿದ್ದಿ ಜನಾಂಗಕ್ಕೆ ಕಪ್ಪು ಜನ ಕೆಂಪು ನೆರಳು ನಾಟಕವನ್ನು ನಿರ್ದೇಶಿಸಿತ್ತು. ತಿರುಗಾಟ ಬರಿಯ ಸುಮ್ಮನೆ ತಿರುಗಾಟವಲ್ಲ ಎಂದು ಈಗ ಸ್ಪಷ್ಟವಾಗಿದೆ. ತಿರುಗಾಟದ ಹೆಸರಿನಲ್ಲಿ ಜಿಲ್ಲೆಯ ನಾಡಿಬಡಿತ ವೀಕ್ಷಿಸಿ ತನ್ನ ಧನಸಹಾಯದ ದೊರೆಗಳಿಗೆ ಕಳಸುವ ಉದ್ದೇಶವೂ ಇದೆ.

ಆದರೆ ಈ ಫೋರ್ಡ್ ಫೌಂಡೇಶನ್ ವ್ಯವಹಾರಗಳು ಸ್ಪಷ್ಟವಾಗಿ ಬಯಲಿಗೆ ಬಿದ್ದಿಲ್ಲದಿರುವುದರಿಂದಲೇ ತಿರುಗಾಟದ ನರುಗಾಟವೂ ಸಲೀಸಾಗಿ ನಡೆದಿದೆ. ಹಿಂದೆ ದಾವಣಗೆರೆಯಲ್ಲಿ ನೀನಾಸಂ ರಂಗಪಂಚಮಿ ಏರ್ಪಡಿಸಲು ಉದ್ದೇಶಿಸಿ ಹೊರಟಾಗ ಅಲ್ಲಿನ ಸಮುದಾಯ ಘಟಕ ಅದಕ್ಕೆ ಸಹಕಾರ ನೀಡಿದ್ದರಿಂದ ಉಂಟಾದ "ಫೋರ್ಡ್" ಗಲಾಟೆ ಇನ್ನೂ ಹೆಚ್ಚು ಬಯಲಿಗೆ ಬೀಳಬೇಕು ಎನ್ನುವ ಸಮುದಾಯದಲ್ಲಿಯೇ ಇದನ್ನು ಮುಚ್ಚಿ ಹಾಕಲು ನಮ್ಮ ಪತ್ರಿಕೆಗಳೂ ಸದಾ ಸಿದ್ಧವಾಗಿದೆ. "ತರಂಗ" ವಾರಪತ್ರಿಕೆ ಈ ವಷದ ತಿರುಗಾಟದ ವಿಶೇಷ ಸ್ಪರ್ಧೆ ನಡೆಸಿ ಸಮೀಕ್ಷೆಗೆ ಕರೆಕೊಟ್ಟಿದೆ.

ಭೀತಿ ಪತ್ರ ಬೇಡ

ಈ ಮಧ್ಯೆ ಸಾರ್ಕ್ ಬಿಸಿ ರಂಗಭೂಮಿಗೂ ಮುಟ್ಟಿದೆ. ಸಾರ್ಕ್ ಸಮಯದಭಿತ್ತಿಪತ್ರ ಅಂಟಿಸದಂತೆ ಮನವಿ ಮಾಡಿದ್ದ ಹೆಗಡೆ ನಂತರವೂ ತಮ್ಮ ಕೆಂಗಣ್ಣನ್ನು ಈ ಭಿತ್ತಿಪತ್ರದೆಡೆಗೆ ಹರಿಬಿಟ್ಟಿದ್ದಾರೆ. ಸಾರ್ಕ್ ನಂತರ ನಾಟಕ ಪ್ರದರ್ಶನದ ಭಿತ್ತಿಪತ್ರ ಅಂಟಿಸುತ್ತಿದ್ದ ರಂಗ ಕರ್ಮಿಗಳನ್ನು ಬಂಧಿಸಿತ್ತು ರಂಗತಂಡಗಳೆಲ್ಲವೂ ಇದರ ಬಗ್ಗೆ ಎಚ್ಚರ ವಹಿಸುವಂತೆ ಮಾಡಿತು. ಭಿತ್ತಿಪತ್ರಗಳನ್ನು ಅಂಟಿಸಲು ಅವಕಾಶ ಕೊಡಲೇ ಬೇಕು ಎಂದು ಎಲ್ಲಾ ರಂಗ ತಂಡಗಳೂ ಧರಣಿ ನಡೆಸಿದವು.

ಜನಪದ ಮತ್ತು ಜಯಶ್ರೀ

ಸಮುದಾಯ ದಶಮಾನೋತ್ಸವ ನಾಟಕಗಳು, ತಿರುಗಾಟ, ಜಯಶ್ರೀ ನಿರ್ದೇಶಿಸಿದ ಲಕ್ಷಾಧಿಪತಿ ರಾಜನ ಕಥೆ ಇವುಗಳಲ್ಲೆಲ್ಲಾ ಮುಖ್ಯ ಉಸಿರಾಗಿದ್ದದ್ದು ಜನಪದ ಶೈಲಿ. ನವ್ಯ ನಾಟಕಗಳು ತಲೆಹಾಕಿ ರಂಗಭೂಮಿಯಲ್ಲಿ ನಾಟಕ ಮತ್ತು ಪ್ರೇಕ್ಷಕನನ್ನು ದೂರ ತಳ್ಳಿದ್ದ ಸಮಯದಲ್ಲಿ ಜನಪದ ಶೈಲಿಗೆ ಹೆಚ್ಚು ಒತ್ತು ನೀಡಿ ಪ್ರೇಕ್ಷಕರನ್ನು ಹತ್ತಿರಕ್ಕೆ ಕರೆಯುತ್ತಿರುವ ಈ ಕ್ರಿಯೆ ರಂಗಭೂಮಿಗೆ ಜನಪದದ ಅನಿವಾರ್ಯತೆಯನ್ನು ಮನವರಿಕೆ ಮಾಡಿಕೊಟ್ಟಿದೆ. ಯಕ್ಷಗಾನ, ವೀರಗಾಸೆ, ಬಯಲಾಟ ಮುಂತಾದ ಪ್ರಕರಣಗಳನ್ನು ನಾಟಕಗಳಿಗೆ ಅಳವಡಿಸಿಕೊಳ್ಳಲಾಗಿದೆ. '86 ರಂಗಭೂಮಿಯಲ್ಲಿ ವಿಶೇಷವಾಗಿ ಕಂಡು ಬರುವುದು ಶೈಲಿಯಿಂದಲೇ. ಇದಕ್ಕೆ ಗರಿಯೆಂಬಂತೆ ಜಯಶ್ರೀ ಬಳ್ಳಾರಿಯಲ್ಲಿ ಸಂಚರಿಸಿ ನಂತರ ನಿರ್ದೇಶಿಸಿದ 'ಲಕ್ಷಾಧಿಪತಿ ರಾಜನ ಕಥೆ" ಯಲ್ಲಿ ಸಂಪೂರ್ಣವಾಗಿ ಜನಪದ ಶೈಲಿಯನ್ನೇ ಅಳವಡಿಸಿಕೊಂಡಿದ್ದ ಈ ನಾಟಕ ರಾಷ್ಟ್ರಮಟ್ಟದ ನಂ. 1 ನಾಟಕ ಎಂದು ಮನ್ನಣೆ ದೊರಕಿಸಿಕೊಂಡಿತು.

ರಂಗನಿರಂತರ :

ಹವ್ಯಾಸಿ ಮತ್ತು ವೃತ್ತಿಗಳ ನಡುವೆ ಬೆಸುಗೆ ಹಾಕಲು ರಂಗನಿರಂತರ ಹೊಸ ತಂಡ ಹುಟ್ಟುಹಾಕಲಾಗಿದೆ. ಈ ತಂಡದ ಹಿಂದೆಯೇ ಇದು ವಾಲಬಹುದಾದ ದಿಕ್ಕಿನ ವಾಸನೆಯೂ ಅಲ್ಪಸ್ವಲ್ಪ ದೊರಕಿದೆ. ಈ ತಂಡ ತನ್ನ ಗುರಿಗಳನ್ನು ಸ್ಪಷ್ಟವಾಗಿಟ್ಟುಕೊಂಡರೆ, ಈ ಯೋಜನೆ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ಯೋಜನೆಯೇನೋ ಸ್ವಾಗತಾರ್ಹ. ಆದರೆ ಅದು ವಾಲುವ ದಿಕ್ಕಿನ ಬಗ್ಗೆ ನಮ್ಮ ಕಳಕಳಿಯಿದೆ.

ಅಡಿಗರಿಗೆ ಕಬೀರ್ ಸನ್ಮಾನ್

ನವ್ಯ ಶೈಲಿಯ ಪ್ರವರ್ತಕ ಎಂದೇ ಹೆಸರಾದ ಅಡಿಗರಿಗೆ ಈ ಭಾರಿ ಸಾಹಿತ್ಯ ರಂಗದಲ್ಲಿನ ತಮ್ಮ ಸಾಧನೆಗಾಗಿ ರಾಷ್ಟ್ರಮಟ್ಟದ ಮನ್ನಣೆಯಾದ ಕಬೀರ್ ಸನ್ಮಾನ್ ದೊರಕಿದೆ. ಸಂಗೀತಕ್ಕೆ ಇದುವರೆಗೂ ದೊರಕುತ್ತಿದ್ದ ಕಾಳಿದಾಸ ಸನ್ಮಾನ್‌ನಂತೆ ಈ ವರ್ಷ ಹೊಸದಾಗಿ ಪ್ರಾರಂಭಿಸಲಾದ ಕಬೀರ್ ಸನ್ಮಾನ್ ಮೊಟ್ಟಮೊದಲನೆಯದಾಗಿ ಕನ್ನಡ ಭಾಷೆಗೆ ಸಂದಿದೆ. "ಕಟ್ಟುವೆವು ನಾವು, ನಡೆದು ಬಂದ ದಾರಿ" ಚಂಡಿಮದ್ದಳೆ, ಭೂಮಿ ಗೀತ, ಇದನ್ನು ಬಯಸಿರಲಿಲ್ಲ | ವರ್ಧಮಾನ ಇವರ ಮುಖ್ಯ ಕವನಸಂಕಲನಗಳು.

ಮೌಲ್ಯಾಧಾರಿತ ರಾಜಕಾರಣ ಜನತಾ ಶೈಲಿ

ಕರ್ನಾಟಕದಲ್ಲಿ ಜನತಾ ಸರ್ಕಾರ ಜಿಲ್ಲಾ ಪರಿಷತ್- ಮಂಡಲ ಪಂಚಾಯತ್ ಸಂಸ್ಥೆಗಳನ್ನು ರಚಿಸಿ ಚುನಾವಣೆ ನಡೆಸುತ್ತಿರುವುದು ಮತ್ತು ಮತದಾನದ ವಯೋಮಿತಿಯನ್ನು 18 ವರ್ಷಕ್ಕಿಳಿಸಿರುವುದು ಸ್ವಾಗತಾರ್ಹವಾಗಿದೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಸಾಧನೆಯನ್ನು ಅನುಸರಿಸಿ ಮಸೂದೆಯನ್ನು ಮಂಡಿಸಿದ ಶ್ರೀ ನಜೀರ್‌ಸಾಬ್ ರವರನ್ನು ಹಿಂದೆ ತಳ್ಳಿ ಶ್ರೀ ರಾಮಕೃಷ್ಣ ಹೆಗ್ಡೆಯವರು ಇದೊಂದು ತಮ್ಮ ಸ್ವಂತ ಚಿಂತನೆಯ ಶಿಶುವೆಂಬಂತೆ ಬೆನ್ನು ತಟ್ಟಿಕೊಳ್ಳುತ್ತಿರುವುದು ಸಂದರ್ಭಸಾಧಕತನದ ಪ್ರತೀಕವಾಗಿದೆ. ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಇಂದು ವಾಸ್ತವವಾಗಿ ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳು ಜಿಲ್ಲಾ ಪರಿಷತ್ ಗದ್ದುಗೆಯೇರಿರುವುದು ಸ್ಪಷ್ಟವಾಗಿದೆ.

ಹಣ-ಅಧಿಕಾರದ ಬಲವುಳ್ಳ ಕಾಂಗ್ರೆಸ್ [ಐ]-ಜನತಾ ಪಕ್ಷಗಳು ಭ್ರಷ್ಟಾಚಾರ ಹಾಗೂ ಜಾತೀಯತೆಯ ಮೂಲಕ ತೀವ್ರ ಸೆಣಸಾಟ ನಡೆಸಿ ಸಮಬಲ ಪ್ರದರ್ಶಿಸಿವೆ. ಎಡಪಕ್ಷಗಳು ಈ ಬಿರುಗಾಳಿಯ ವಿರುದ್ಧ ಸ್ಪರ್ಧಿಸುವುದು ಸುಲಭದ ಕೆಲಸವಲ್ಲ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಸವಾಡಿ, ಹಣಬೆ ಹಾಗೂ ಅನಗೊಂಡನಹಳ್ಳಿ ಕ್ಷೇತ್ರಗಳಲ್ಲಿ ಸಿ ಪಿ. ಐ. (ಎಂ). ಅಭ್ಯರ್ಥಿಗಳ ಪರವಾಗಿ ಪ್ರಚಾರಕದವನಾಗಿ ಕೆಲವು ದಿನಗಳ ಅನುಭವದ ಒಂದೆರಡು ಅಂಶಗಳನ್ನು ಐಕ್ಯರಂಗ ಓದುಗರಿಗೆ ತಿಳಿಸಬಯಸುತ್ತೇನೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಚುನಾವಣಾ ಪ್ರಚಾರದ ಉದ್ಘಾಟನಾ ಸಮಾರಂಭದ ದಿನ ಕಾಂ. ಸೂರಿಯವರೊಂದಿಗೆ ತೆರಳಿದ್ದೆನು. ಮರುದಿನದಿಂದ ನಮ್ಮ ಅಭ್ಯರ್ಥಿಗಳು ತಮ್ಮ ಪ್ರಚಾರವನ್ನು ಪ್ರಾರಂಭಿಸಿದರು. ಹಣಬೆ ಕ್ಷೇತ್ರದ ಅಭ್ಯರ್ಥಿ ಕಾಂ. ವೆಂಕಟರಾಮಯ್ಯ ಕೆಲವು ಕಾರ್ಯಕರ್ತರೊಂದಿಗೆ ಸೈಕಲ್‌ಗಳಲ್ಲಿ ಹಳ್ಳಿಹಳ್ಳಿಗೆ ಪ್ರಚಾರಕ್ಕೆ ತೆರಳಿದರು. ಜನತಾ ಅಭ್ಯರ್ಥಿಯು ಸುಮಾರು 25 ಕಾರುಗಳು ಹಾಗೂ ನೂರಾರು ಬಾಡಿಗೆ ಕಾರ್ಯಕರ್ತರೊಂದಿಗೆ ಅಬ್ಬರದ ಪ್ರಚಾರ ನಡೆಸುವುದರೊಂದಿಗೆ ಸಿ. ಪಿ. ಐ. (ಎಂ). ಪಕ್ಷದ ಬೆಂಬಲಿಗರನ್ನು ಬೆದರಿಸಿ ಬಾಯಿಮುಚ್ಚಿಸಲು ಪ್ರಯತ್ನಿಸುತ್ತಿರುವುದಾಗಿ ನಮ್ಮ ಅಭ್ಯರ್ಥಿಯಿಂದ ತಿಳಿದು ಬಂದಿತು.

ಕನಸವಾಡಿ ಕ್ಷೇತ್ರದಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಕಾ॥ ಬಿ. ಕೆ. ರಾಧಮ್ಮ ಕೆಲವು ಸಂಗಾತಿಗಳೊಡನೆ ಪ್ರತಿದಿನವೂ ಹಳ್ಳಿ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲೇ ಹೋಗಿ ಪ್ರಚಾರ ನಡೆಸಿದರು. ನಾನೂ ಸಹ ಅವರೊಂದಿಗೆ ಹತ್ತಾರು ಮೈಲಿಗಳನ್ನು ನಡೆದು ಕೆಲವು ಹಳ್ಳಿಗಳನ್ನು ಸುತ್ತಿ ಬಂದಾಗ ಪ್ರಚಾರ ಸಾಧನಗಳೂ ಇಲ್ಲದೆ ಆಳುವ ವರ್ಗದ ಪಕ್ಷಗಳ ಸ್ಪರ್ಧೆಯನ್ನು ಹೇಗೆ ಎದುರಿಸುವುದೆಂದು ಯೋಚಿಸಿದೆ. ರೈತ ಸಂಘಟನೆಯ ಪ್ರಭಾವ ಅಲ್ಪಸ್ವಲ್ಪವಿದ್ದರೂ ಅದು ಸಾಲದಾಗಿತ್ತು.

ಒಂದೆರಡು ದಿನಗಳ ಕಾಲ ತುಮಕೂರು ಜಿಲ್ಲೆಯ ಹಾಗಲವಾಡಿ ಕ್ಷೇತ್ರದಲ್ಲಿ ಕಾ॥ ಹೆಚ್. ಸಿ. ಬನ್ನಪ್ಪನವರ ಪರವಾಗಿ ಪ್ರಚಾರ ನಡೆಸಿದೆ. ಈ ಕ್ಷೇತ್ರದಲ್ಲಿ ಜನತಾ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದವರು ನನ್ನ ಹತ್ತಿರದ ಸಂಬಂಧೀಕರಾಗಿದ್ದರೂ ಕಮ್ಯುನಿಸ್ಟ್ ಪಕ್ಷದಲ್ಲಿ ಜಾತಿ-ಸಂಬಂಧ-ವ್ಯಕ್ತಿ ನಿಷ್ಟೆಗಳ ಬದಲು ತತ್ವನಿಷ್ಟೆ-ಪಕ್ಷದ ಶಿಸ್ತು-ಜನತೆಯ ಹಿತ ಮುಖ್ಯವೆಂಬ ಅಂಶವನ್ನು ಪ್ರಚಾರ ಭಾಷಣಗಳಲ್ಲಿ ಒತ್ತಿಹೇಳಿದೆ.

ಎಸ್. ಆರ್. ಆರಾಧ್ಯ

ಚುನಾವಣೆ ಅನುಭವಗಳು

ಕರ್ನಾಟಕ ರಾಜ್ಯದಲ್ಲಿ ಪ್ರಥಮ ಭಾರಿಗೆ ಪ್ರಾರಂಭವಾಗಿರುವ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಪಕ್ಷದ ವತಿಯಿಂದ ಕಾಂ. ಬಿ. ಪರಶುರಾಂ (ಅರಸೀಕೆರೆಕ್ಷೇತ್ರ) ಬೆಂಬಲಿತ ಅಭ್ಯರ್ಥಿಯಾಗಿ ಎಂ. ದುರುಗಪ್ಪ (ಹಲುವಾಗಲು ಕ್ಷೇತ್ರ) ಕ್ಕೆ ಸ್ಪರ್ಧಿಸಿದ್ದರು. ನಾಮಪತ್ರವನ್ನು ಹಿಂತೆಗೆದು ಕೊಳ್ಳುವ ಒಂದು ದಿನದ ಹಿಂದೆ ಹಲುವಾಗಲು ಕ್ಷೇತ್ರದ ಕಾಂಗ್ರೆ ಅಭ್ಯರ್ಥಿ ಕೆ. ರಾಮಚಂದ್ರಪ್ಪ ರಾತ್ರಿ 12 ಗಂಟೆಗೆ ದುರುಗಪ್ಪನವರ ಮನೆಗೆ ಬಂದು ಲಂಚದ ಆಮಿಷ ತೋರಿಸಿ ಒಪ್ಪದಿದ್ದಾಗ ಕೆಂಡಕಾರುತ್ತ ಹಿಂರುಗಿದನು. 23ನೇ ತಾರೀಖಿನಿಂದ ಎರಡು ತಂಡವಾಗಿ ಅರಸಿಕೆರೆ ಮತ್ತು ಹಲುವಾಗಲು ಕ್ಷೇತ್ರಕ್ಕೆ ಸೈಕಲ್ ಜಾಥಾ ಮಾಡಿ ಪ್ರತಿಯೊಂದು ಹಳ್ಳಿಯಲ್ಲಿ ಬಂಡಾಯ ಕವಿ ಸಿದ್ದಲಿಂಗಯ್ಯನವರ ಮತ್ತು ನಮ್ಮ ಕಾರ್ಯಕರ್ತರು ರಚಿಸಿರುವ ಹಾಡುಗಳನ್ನು ಹಾಡುತ್ತಾ ಭಾಷಣವನ್ನು ಮಾಡುತ್ತಿದ್ದೆವು. ರಸ್ತೆಗಳು ಸರಿಯಿಲ್ಲದೆ ತುಂಬಾ ಪ್ರಯಾಸದ ಪ್ರಯಾಣವನ್ನು ಮಾಡಿದೆವಲ್ಲದೆ. ಊಟದ ಅನಾನುಕೂಲತೆಯಾಗಿ ಹಾಡಲು ಭಾಷಣ ಮಾಡಲು ಧ್ವನಿ ಕೆಡದಿರಲೆಂದು ಶುಂಠಿ, ಬೆಲ್ಲವನ್ನು ತೆಗೆದುಕೊಂಡು ಹೋಗಿದ್ದೆವು ಅದನ್ನೆ ನಮ್ಮ ಕಾರ್ಯಕರ್ತರು ಗಬಗಬನೆ ತಿಂದು ನೀರು ಕುಡಿದು ಉತ್ಸಾಹದಿಂದ ಜಾಥಾವನ್ನು ಯಶಸ್ವಿಗೊಳಿಸಿದರು.

ಪ್ರತಿ ಹಳ್ಳಿಯಲ್ಲಿ ರಸ್ತೆ, ನೀರು, ಮನೆ, ಹಸಿರು ಕಾರ್ಡು, ಕರೆಂಟ್, ವಾಹನ ಶಾಲೆಯ ಸಮಸ್ಯೆಗಳು

(6ನೇ ಪುಟ ನೋಡಿ)

ಜನವರಿ 21, 1987 ರಂದು

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ ಯಶಸ್ವಿಗೊಳಿಸಿರಿ

ಎಲ್ಲಾ ಸಂಘಟನೆಗಳಿಗೆ ಸಂಬಂಧಪಟ್ಟ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಬೇರೆ ಬೇರೆ ಸಂಘಟನೆಗಳಿಗೆ ತಾವು ಸೇರಿಕೊಂಡಿದ್ದರೂ ಕೂಡ 21-1-87 ರಂದು ಸಂಪೂರ್ಣ ಮುಷ್ಕರ ಹೂಡಿ ತಮ್ಮ ಐಕ್ಯತೆಯ ಪ್ರತೀಕವನ್ನು ತೋರ್ಪಡಿಸಲಿದ್ದಾರೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ದಿಲ್ಲಿಯ ಸಮಾವೇಶದ ನಿರ್ಣಯದ ಪ್ರಕಾರ ಅವರು ಮುಷ್ಕರ ಮಾಡುತ್ತಾರೆ. ಅದರಲ್ಲಿ 800ಪ್ರತಿನಿಧಿಗಳು ಭಾಗವಹಿಸಿದ್ದು ಅದು ಸಾರ್ವಜನಿಕ ಕ್ಷೇತ್ರದ ಸಂಘಟನೆಗಳ ಅತಿ ದೊಡ್ಡ ಸಮಾವೇಶವಾಗಿತ್ತು.

ಈ ಮುಷ್ಕರಕ್ಕೆ ಮುಖ್ಯ ಕಾರಣ ವೇನು ? ತಮ್ಮ ತುರ್ತಿನ ಬೇಡಿಕೆಗಳಿಗಾಗಿ ಮಾತ್ರ ಕಾರ್ಮಿಕವರ್ಗ ನೇರ ಹೋರಾಟಮಾಡುತ್ತಿಲ್ಲ.ಅವರು ದೇಶದ ಆರ್ಥಿಕತೆಯನ್ನು ರಕ್ಷಿಸಲು, ಸ್ವಾತಂತ್ರ್ಯವನ್ನು ಕಾಪಾಡಲು ಹಾಗೂ ರಾಷ್ಟ್ರದ ಹಿತಾಸಕ್ತಿಗಳಿಗಾಗಿ ಮುಷ್ಕರ ಹೂಡುತ್ತಾರೆ. ಸಾರ್ವಜನಿಕ ಕ್ಷೇತ್ರವನ್ನು ಅವಹೇಳನ ಮಾಡಿ ಅದನ್ನು ಅಭದ್ರಗೊಳಿಸುವ ರಾಜೀವ ಗಾಂಧಿಯವರ ನೀತಿಯ ವಿರುದ್ಧ ಈ ಪ್ರತಿಭಟನೆಯಾಗಿದೆ. ಸಾರ್ವಜನಿಕ ಕ್ಷೇತ್ರ ಇಲ್ಲದಿದ್ದಲ್ಲಿ ಈ ಹೊತ್ತು ಭಾರತದೇಶ ಸಾಮ್ರಾಜ್ಯಶಾಹಿಗಳ ಪ್ರಾಧಾನ್ಯತೆಗೊಳಗಾದ ಪಾಶ್ಚಿಮಾತ್ಯ ಆರ್ಥಿಕತೆಗೆ ಬಲಿಯಾಗುತ್ತಿತ್ತು.

ಸಾರ್ವಜನಿಕ ಕ್ಷೇತ್ರವನ್ನು ರಕ್ಷಿಸುವ ಸಲುವಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸುವ ಮುಷ್ಕರದ ನೋಟೀಸನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸಾರ್ವಜನಿಕ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದಕ್ಕೆ ತಡೆ, ಸಾರ್ವಜನಿಕ ಕ್ಷೇತ್ರದ ಚಟುವಟಿಕೆಗಳಲ್ಲಿ ಬಹುರಾಷ್ಟ್ರೀಯರ ಮತ್ತು ಗುತ್ತೆದಾರಿಗಳಿಗೆ ಅವಕಾಶ ಒದಗಿಸದಿರುವುದು, ದೇಶದ ಕೈಗಾರಿಕೆಗಳ ಬೆಳವಣಿಗೆಗೆ ಅಡ್ಡಿಉಂಟುಮಾಡುವ ತಂತ್ರಜ್ಞಾನ ಮತ್ತು ವಸ್ತುಗಳನ್ನು ಆಮದು ಮಾಡುವುದನ್ನು ನಿಲ್ಲಿಸುವುದು, ಕಾರ್ಮಿಕ ಸಂಘಗಳನ್ನು ಮುಂಚಿತವಾಗಿ ಕೇಳದೆ, ಆಧುನೀಕರಣ, ಕಂಪ್ಯೂಟರೀಕರಣಗಳನ್ನು ಜಾರಿಮಾಡದಿರುವುದು ಮತ್ತು ಕಾಯಂ ಕೆಲಸಗಾರರ ಕೆಲಸವನ್ನು ಕಂಟ್ರಾಕ್ಟರರಿಗೆ ಒಪ್ಪಿಸುವುದು ಈ ಅಂಶಗಳು ಮುಷ್ಕರದ ನೋಟೀಸಿನಲ್ಲಿವೆ. ಅದರ ಜೊತೆಯಲ್ಲಿಯೇ ಕಾರ್ಮಿಕರು ತುರ್ತಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕೆಂದೂ ಆ ನೋಟೀಸಿನಲ್ಲಿ ತಿಳಿಸಲಾಗಿದೆ.

ರಾಜೀವ ಗಾಂಧಿಯವರ ಆರ್ಥಿಕ ಧೋರಣೆಯ ವಿರುದ್ಧ ಕಾರ್ಮಿಕ ವರ್ಗದ ಈ ಪ್ರತಿಭಟನೆ ಬಹಳ ಮಹತ್ವದ್ದಾಗಿದೆ. 1986 ರಾಜೀವ ಸರಕಾರದ ಹೊಸ ಆರ್ಥಿಕ ನೀತಿಯ ಆಕ್ರಮಣದ ವರ್ಷ ಎಂದು ಹೆಸರುಗಳಿಸಿಕೊಂಡಿದೆ. ಜತೆಗೆ ಎದುರಿಸುತ್ತಿರುವ ಸಂಕಷ್ಟ ಮತ್ತು ಬಡತನಕ್ಕೆ, ನಿರುದ್ಯೋಗ, ನೆರೆಹಾವಳಿ ಹಾಗೂ ಬರಗಾಲಗಳನ್ನೂ ಸೇರಿಸಬೇಕಾಗಿದೆ. ಹೊಸ ಆರ್ಥಿಕ ಧೋರಣೆ ಈ ಅನಿಷ್ಟಗಳನ್ನೆಲ್ಲ ದ್ವಿಗುಣಗೊಳಿಸುತ್ತದೆ, ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳು ನಮ್ಮ ಆರ್ಥಿಕತೆಯನ್ನು ಗುಲಾಮನನ್ನಾಗಿ ಮಾಡುವ ಭೀತಿಯನ್ನುಂಟುಮಾಡುತ್ತದೆ.

ಸಾರ್ವಜನಿಕ ಕ್ಷೇತ್ರದ ಮೇಲೆ ವಿಧಿವತ್ತಾಗಿ ವಿರೋಧ ವ್ಯಕ್ತಮಾಡುವುದು ಈ ಹೊಸ ನೀತಿಯ ಕೇಂದ್ರ ಬಿಂದುವಾಗಿದೆ. ಭಾರತ ದೇಶದ ಆರ್ಥಿಕತೆಗೆ ಸ್ವತಂತ್ರ ಅಡಿಪಾಯ ನಿರ್ಮಿಸುವ ಸಲುವಾಗಿ ಹಿಂದಿನ ಸರ್ಕಾರಗಳು ಸಾರ್ವಜನಿಕ ಕ್ಷೇತ್ರವನ್ನು ಶ್ರಮಪಟ್ಟು ನಿರ್ಮಿಸಿದ್ದಾರೆ. ಈಗ ಧರ್ಮಯುದ್ಧದ ರೀತಿಯ ಉತ್ಸಾಹದಿಂದ ಅದನ್ನು ನಾಶಮಾಡಲಾಗುತ್ತಿದೆ. ಬಂಡವಾಳಶಾಹಿ ಪಥದ ಮೂಲಕ ರಚಿಸಿದ ಆರ್ಥಿಕತೆಯ ಬಿಕ್ಕಟ್ಟು ವಿಶ್ವಬ್ಯಾಂಕಿನ ಹಲವಾರು ಬೇಡಿಕೆಗಳನ್ನು ಸರ್ಕಾರ ಒಪ್ಪಿಕೊಳ್ಳುವಂತೆ ಒತ್ತಾಯಿಸಿ, ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ದೇಶವನ್ನು ಒಪ್ಪಿಸುವಂತೆ ಮಾಡುತ್ತಿದೆ. ಇತ್ತೀಚೆಗಿನ ಅಂಕೆಸಂಖ್ಯೆಗಳ ಪ್ರಕಾರ, ಈ ಧೋರಣೆಯನ್ನೇ ಮುಂದುವರಿಸಿದ್ದಾದರೆ ನಮ್ಮ ದೇಶ ಸಾಲದ ಬಲೆಯಲ್ಲಿ ಸಿಕ್ಕಿಕೊಂಡು ಅದರಿಂದ ಹೊರಗೆ ಬರಲು ಅಸಾಧ್ಯನಾದೀತು. ಈ ಧೋರಣೆಯ ಅಪಾಯ ಮತ್ತು ಪರಿಣಾಮಗಳೇನು. ಮೊದಲನೆಯದಾಗಿ ಸಾರ್ವಜನಿಕ ಕ್ಷೇತ್ರ ಬಹುರಾಷ್ಟ್ರೀಯ ಏಜೆಂಟರಿಂದ ಆಕ್ರಮಿಸಲ್ಪಡುವ ಅಪಾಯವಿದೆ ಮತ್ತು ಭಾರತದ ಆರ್ಥಿಕತೆಯಸ್ವಾತಂತ್ರ್ಯಕ್ಕೆ ಅಪಾಯವಿದೆ. ಎರಡನೆಯದಾಗಿ ಈ ಧೋರಣೆಯ ತುರ್ತಿನ ಪರಿಣಾಮವೇನೆಂದರೆ ಭಾರತದ ಕೈಗಾರಿಕೆಗಳು ಹಾಳಾಗುವುದರ ಮುಂದುವರಿಕೆ ಹಾಗೂ ನಿರುದ್ಯೋಗದಲ್ಲಿ ಹೆಚ್ಚಳ. ಸಾರ್ವಜನಿಕ ಕ್ಷೇತ್ರದ ಕುರಿತು ಸರ್ಕಾರವೇ ಪಕ್ಷಪಾತ ನಡೆಸಿ, ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಆರ್ಡರ ಕೊಡುತ್ತಿದೆ. ಬಿ.ಎಚ್.ಇ.ಎಲ್.ಗೆ ಆರ್ಡರ ಕೊಡದೆ ಇಟಲಿ ಮತ್ತಿನ್ನಿತರ ದೇಶಗಳ ಕಂಪೆನಿಗೆ ಕೊಡುತ್ತಿದೆ. ಕಾಶ್ಮೀರದಲ್ಲಿ ವಿದೇಶಿ ಕಂಪೆನಿಯೊಂದಕ್ಕೆ ಈಗಾಗಲೇ ಆರ್ಡರ ಕೊಟ್ಟಿದೆ.

ಆಮದು ನೀತಿಯ ಸಡಿಲಿಕೆಯಿಂದಾಗಿ ಬಂಡವಾಳ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳು ಹಿಂಜರಿತವನ್ನೆದುರಿಸುತ್ತಿವೆ. ಹೊಸ ನೀತಿಯ ಲಾಭ ಪಡೆದು ವಿದೇಶಿ ಉತ್ಪಾದಕರು ನಮ್ಮ ಮಾರ್ಕೇಟಿನಲ್ಲಿ ತಾವು ಉತ್ಪಾದಿಸಿ ವಸ್ತುಗಳನ್ನು ಧಾರಾಳವಾಗಿ ಒದಗಿಸಿ, ನಮ್ಮ ದೇಶದ ಬಂಡವಾಳ ವಸ್ತುಗಳನ್ನು ಹೊರದಬ್ಬುತ್ತಿದ್ದಾರೆ. 1985-86 ರಲ್ಲಿ ಬಂಡವಾಳ ವಸ್ತುಗಳ ಉತ್ಪಾದನೆ ಶೇ. 3.6 ರಷ್ಟು ಬೆಳವಣಿಗೆ ತೋರಿಸಿತ್ತು. ಅದರ ಬದಲಾಗಿ 1984-85ರಲ್ಲಿ ರೂ. 5500 ಕೋಟಿ ವ್ಯಾಪಾರಿ ಕೊರತೆ ಇದ್ದದ್ದು 1985-86ರಲ್ಲಿ ಅದು ರೂ. 8600 ಕೋಟಿಯಷ್ಟು ಹೆಚ್ಚಾಗಿದೆ. ಯಾಕೆಂದರೆ ಮೆಶಿನರಿ ಮತ್ತು ಮೆಶಿನ ಟೂಲ್ಸಗಳನ್ನೊಳಗೊಂಡು ಆಮದು ಹೆಚ್ಚಾಗಿದೆ. ಮೆಶಿನ್ ಉತ್ಪಾದನೆಮಾಡುವ 9ಕೈಗಾರಿಕೆಗಳ ಪೈಕಿ ರಬ್ಬರ ಮೆಶಿನರಿ 1984-85ಕ್ಕೆ ಹೋಲಿಸಿದರೆ, 1985-86 ರಲ್ಲಿ ಶೇ. 14.5ರಷ್ಟು ಕಡಿಮೆಯಾಗಿದೆ. ವೈನಿಂಗ ಮೆಸಿನರಿ ಶೇ. 10.2 ರಷ್ಟು, ಪೇಪರ್ ಮೆಶಿನರಿ ಶೇ. 6.2ರಷ್ಟು, ಸಕ್ಕರೆ ಮೆಶಿನರಿ ಶೇ. 2.7ರಷ್ಟು, ಪ್ರಿಂಟಿಂಗ್

ಬಿ. ಟಿ. ರಣದಿವೆ

ಮೆಶಿನರಿ ಶೇ. 1.9ರಷ್ಟು ಹಾಗೂ ಔಷಧಗಳ ಮೆಶಿನರಿ ಶೇ. 1.1ರಷ್ಟು ಕಡಿಮೆ ತೋರಿಸುತ್ತಿದೆ.

ಭಾರತದ ಮಾರ್ಕೆಟಿನಲ್ಲಿ ಪೈಪೋಟಿ ನಡೆಸುವ ಸಲುವಾಗಿ ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಆಮಂತ್ರ ಕೊಟ್ಟಿರುವ ಈಗಿನ ಆಮದು ನೀತಿ ಈ ರೀತಿ ಉಂಟು ಮಾಡಿದೆ.

ಈಗ ಈ ಬಹುರಾಷ್ಟ್ರೀಯ ಕಂಪೆನಿಗಳು ಸರ್ಕಾರಿ ಕಂಟ್ರಾಕ್ಟಗಳಲ್ಲಿ ಪೈಪೋಟಿ ನಡೆಸಿವೆ. ಸಾರ್ವಜನಿಕ ಕ್ಷೇತ್ರದ ಟೆಂಡರ್‌ಗಳನ್ನು ಕಡೆಗಣಿಸಿ, ಸರ್ಕಾರ ವಿದೇಶಿಯರಿಗೆ ಆದ್ಯತೆ ನೀಡುತ್ತಿದೆ.

ಇಂಥ ಆರ್ಥಿಕ ನೀತಿಯನ್ನು ಮುಂದುವರಿಸಿದ್ದಾದರೆ ಅದು ದೇಶದಲ್ಲಿಯ ಉದ್ಯೋಗದ ಪರಿಸ್ಥಿತಿ ಹಾಗೂ ಆರ್ಥಿಕತೆಯ ಮೇಲೆ ಗಂಡಾಂತರಕಾರಿ ಪರಿಣಾಮವನ್ನುಂಟು ಮಾಡುತ್ತದೆ. ಅದು ಎಲ್ಲ ಯೋಜನೆಗಳನ್ನು ಹಾಳುಮಾಡಿ ದೇಶದ ಜನರು ಬಹುರಾಷ್ಟ್ರೀಯ ಸಂಸ್ಥೆಗಳ, ಖಾಸಗೀ ಗುತ್ತೆದಾರಿಗಳ ಕೃಪೆಗೆ ಒಳಗಾಗುವಂತೆ ಮಾಡುತ್ತದೆ. ಇದರಿಂದಾಗಿ ಆರ್ಥಿಕತೆಯ ಸ್ವಾತಂತ್ರ್ಯವನ್ನು ಬಲಿಕೊಟ್ಟು, ಸ್ವಾವಲಂಬನದ ಮಾತುಗಳನ್ನು ಬಿಟ್ಟುಕೊಟ್ಟಂತಾಗುತ್ತದೆ.

ರಾಷ್ಟ್ರದ ಹಿತಕ್ಕೆ ಅಪಾಯವನ್ನುಂಟು ಮಾಡುವ ಈ ಗಂಡಾಂತರಕಾರಿ ಧೋರಣೆಯ ವಿರುದ್ಧ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಪ್ರತಿಭಟನೆ ಮಾಡುತ್ತಿದ್ದಾರೆ ಮತ್ತು ಮುಷ್ಕರ ಹೂಡುತ್ತಿದ್ದಾರೆ. ಅವರು ದೇಶಪ್ರೇಮಿಗಳ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದೇಶದ ಹಾಗೂ ಜನರ ಆವಶ್ಯಕತೆಗಳ ರಕ್ಷಣೆಗಾಗಿ ಆರ್ಥಿಕ ಧೋರಣೆಗಳಲ್ಲಿ ಮಧ್ಯ ಪ್ರವೇಶಿಸುವ ಮೂಲಕ ಕಾರ್ಮಿಕ ಚಳುವಳಿಯಲ್ಲಿ ಹೊಸ ಮಾರ್ಗ ಅನುಸರಿಸುತ್ತಿದ್ದಾರೆ.

ಎಲ್ಲಾ ಕಾರ್ಮಿಕರೂ, ಟ್ರೇಡಯೂನಿಯನ್‌ಗಳೂ, ಸಾರ್ವಜನಿಕರೂ, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಈ ಚಳುವಳಿಗೆ ಬೆಂಬಲ ನೀಡಬೇಕು. ರಾಜೀವಗಾಂಧಿಯವರ ಆರ್ಥಿಕ ನೀತಿಯ ವಿರುದ್ಧ ಪ್ರತಿಭಟಿಸಲು ಸಾಧ್ಯವಾದಲ್ಲಿ ಮುಷ್ಕರವನ್ನೊಳಗೊಂಡು ಸೌಹಾರ್ದ ಕ್ರಮಕೈಗೊಳ್ಳಬೇಕು. ರಾಷ್ಟ್ರದಆರ್ಥಿಕತೆಯ ರಕ್ಷಣೆಗೆ, ಸಾರ್ವಜನಿಕ ಕ್ಷೇತ್ರದ ಬೆಂಬಲಕ್ಕೆ, ಬಹುರಾಷ್ಟ್ರೀಯ ಸಂಸ್ಥೆಗಳ ಒಳನುಗ್ಗುವುದರ ವಿರುದ್ಧ ಜನವರಿ 21 ಕಾರ್ಮಿಕ ವರ್ಗದ ಐಕ್ಯತೆಯ, ವಿಶಾಲ ಬೆಂಬಲದ ದಿನವಾಗಲಿ, ತಮ್ಮ ತುರ್ತು ಅಗತ್ಯಗಳನ್ನು ರಕ್ಷಿಸುವುದಷ್ಟೇ ತಮ್ಮ ಕರ್ತವ್ಯ ಮಾತ್ರವಲ್ಲ, ಸರ್ಕಾರದ ಒಪ್ಪಂದ ಮಾಡಿಕೊಳ್ಳುವ ನೀತಿಗಳ ವಿರುದ್ಧ ಜನತೆಯ ಮತ್ತು ದೇಶದ ಹಿತರಕ್ಷಣೆಗಾಗಿಯೂ ಮುಂದಾಳುತ್ವ ವಹಿಸಬೇಕಾಗಿದೆಂಬುದನ್ನು ಟ್ರೇಡ ಯೂನಿಯನ್ ಚಳುವಳಿಯ ಎಲ್ಲಾ ವಿಭಾಗ ನೆನಪಿಸಿಕೊಳ್ಳುವುದು ಅತ್ಯಗತ್ಯ. ಜನವರಿ 21ರ ಮುಷ್ಕರವನ್ನು ಯಶಸ್ವಿಗೊಳಿಸಲು ಎಲ್ಲಾ ವರ್ಗದ ಕಾರ್ಮಿಕರು ಸಹಾಯಮಾಡಲಿ.

ಈ ಮುಷ್ಕರದ ಬೇಡಿಕೆಗಳು

ಈ ಕೆಳಗಿನ ಬೇಡಿಕೆಗಳಿಗಾಗಿ ಒತ್ತಾಯಿಸಲು 1987 ರ ಜನವರಿ 21 ರಂದು ದೇಶಾದ್ಯಂತ ಸಾರ್ವಜನಿಕ ವಲಯದ ಎಲ್ಲ ಕಾರ್ಮಿಕರ ಹಾಗೂ ನೌಕರರ ಒಂದು ದಿನದ ಮುಷ್ಕರ ನಡೆಯುತ್ತದೆ.

1. ಸಾರ್ವಜನಿಕ ವಲಯದ ಖಾಸಗೀಕರಣದ ಧೋರಣೆಯನ್ನು ನಿಲ್ಲಿಸಬೇಕು.
2. ಸಾರ್ವಜನಿಕ ವಲಯದ ಕಾರ್ಯಕ್ಷೇತ್ರದೊಳಗೆ ಬಹುರಾಷ್ಟ್ರೀಯ ಹಾಗೂ ಗುತ್ತೇದಾರಿ ಕಂಪನಿಗಳ ಪ್ರವೇಶವನ್ನು ವಿರೋಧಿಸಬೇಕು.
3. ನಮ್ಮ ಅಭಿವೃದ್ಧಿಗೆ ಮಾರಕವಾದ ತಂತ್ರಜ್ಞಾನ ಹಾಗೂ ಸರಕುಗಳ ಆಮದನ್ನು ನಿಲ್ಲಿಸಬೇಕು.
4. ಕಾರ್ಮಿಕ ಸಂಘಗಳ ಒಪ್ಪಿಗೆಯಿಲ್ಲದೆ ಆಧುನೀಕರಣ, ಕಂಪ್ಯೂಟರೀಕರಣ ಇತ್ಯಾದಿಗಳನ್ನು ಆರಂಭಿಸುವುದನ್ನು ವಿರೋಧಿಸಬೇಕು
5. ನಿಯಮಿತ ಕಾರ್ಮಿಕರ ಕೆಲಸಗಳನ್ನು ಖಾಸಗೀ ಕಂಟ್ರಾಕ್ಟರುಗಳಿಗೆ ವರ್ಗಾಯಿಸುವುದಕ್ಕೆ ನಕಾರ.
6. ಸಾರ್ವಜನಿಕ ವಲಯದ ಎಲ್ಲ ಕೆಲಸಗಳಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ.
7. ಹಿಂದಿನ ಒಪ್ಪಂದಗಳ ಪ್ರಕಾರ ಎಲ್ಲೆಲ್ಲಿ ವೇತನ ಮಾತುಕತೆಗಳು ಆರಂಭವಾಗಬೇಕಾಗಿದೆಯೋ ಅಲ್ಲೆಲ್ಲಾ ಅವನ್ನು ತಕ್ಷಣ ಆರಂಭಿಸಬೇಕು.
8. ವೇತನವನ್ನು ಉತ್ಪಾದಕತೆಯೊಂದಿಗೆ ಗಂಟು ಹಾಕುವುದಕ್ಕೆ ನಕಾರ.
9. ಎಲ್ಲಾ ಹಂತಗಳಲ್ಲಿ ಬೆಲೆಯೇರಿಕೆಯಿಂದ ಪೂರ್ಣ ಪರಿಹಾರ ದೊರೆಯುವಂತೆ ತುಟ್ಟಿಭತ್ಯದ ದರದಲ್ಲಿ ಹೆಚ್ಚಳ.
10. ಸ್ಥಾಯೀ ಆಜ್ಞೆಗಳ ತಿದ್ದುಪಡಿ ಮತ್ತು ಶಾಸನ ಮೂಲಕ ಪ್ರತಿಬಂಧಕ ಹೇರಿ ಕಾರ್ಮಿಕಸಂಘಟನೆಯ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಮಾಡುವುದನ್ನು ವಿರೋಧಿಸಬೇಕು.
11. ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚುವುದು, ಲೇಆಫ್, ಕಾರ್ಮಿಕರ ವಜಾ ಹಾಗೂ ಡಿನೋಟಿಫಿಕೇಟ್ ಮಾಡಕೂಡದು.
12. ಸಂವಿಧಾನದಲ್ಲಿ ದುಡಿಮೆಯ ಹಕ್ಕನ್ನು ಮೂಲಭೂತ ಹಕ್ಕಾಗಿ ಸೇರಿಸಬೇಕು. ಅದುವರೆಗೆ ನಿರುದ್ಯೋಗ ಭತ್ಯೆ ನೀಡಬೇಕು.
13. ಬಿ. ಪಿ. ಇ.(ಸಾರ್ವಜನಿಕ ಉದ್ದಿಮೆಗಳ ಕಚೇರಿ) ಮನಬಂದಂತೆ ಮಧ್ಯ ಪ್ರವೇಶಿಸುವುದು ಮತ್ತು ಸಾರ್ವಜನಿಕ ಉದ್ದಿಮೆಗಳ ಅಧಿಕಾರಶಾಹೀಕರಣ ಕೊನೆಗೊಳ್ಳಬೇಕು.
14. ಆಡಳಿತದಲ್ಲಿ ಕಾರ್ಮಿಕರ ನೈಜವಾದ ಭಾಗವಹಿಸುವಿಕೆಯನ್ನು ಜ್ಯಾರಿಗೆ ತರಬೇಕು.

ಸಮಸ್ಯೆಯ ಅಂತಿಮ ಪರಿಹಾರ - ದುಡಿಯುವ ಜನರ ಪ್ರಭುತ್ವದಲ್ಲಿ

ತುರ್ತು ಪರಿಸ್ಥಿತಿ ಹಾಗೂ ಅದಕ್ಕಿಂತ ಮೊದಲ ದಿನಗಳಲ್ಲಿ ದೇಶಾದ್ಯಂತ ಜನರ ಅಸಂತೃಪ್ತಿ ವ್ಯಕ್ತಗೊಳ್ಳುತ್ತಿದ್ದ ಸಮಯದಲ್ಲಿ "ಹಣದುಬ್ಬರ ಜಗತ್ತಿನಲ್ಲೆಲ್ಲಾ ಕಂಡು ಬರುವ ವಿದ್ಯಮಾನ" ಎಂದು ಆಗಿನ ರಾಷ್ಟ್ರಪತಿಗಳು ಹೇಳುತ್ತಾ ತಿರುಗುತ್ತಿದುದು ನೆನಪಾಗುತ್ತದೆ. ಅದೇ ರೀತಿ ವಸತಿ ಸಮಸ್ಯೆಯೂ ಒಂದು ಜಾಗತಿಕ ವಿದ್ಯಮಾನ ಎಂದು ಹೇಳಿ ನಮ್ಮ ಆಳರಸರು ಈಗ ತಮ್ಮ ಜವಾಬ್ದಾರಿಯಿಂದ ಸುಲಭವಾಗಿ ನುಣುಚಿಕೊಳ್ಳಬಹುದು. ಯಾಕೆಂದರೆ ಅತ್ಯಂತ ಶ್ರೀಮಂತ ದೇಶವೆನಿಸಿರುವ ಅಮೇರಿಕಾದ ದೊಡ್ಡ ನಗರ ನ್ಯೂಯಾರ್ಕ್‌ನಲ್ಲಿ ಕೂಡಾ ಮನೆ ಬಾಡಿಗೆ ಕೊಡುವ ಸಾಮರ್ಥ್ಯ ವಿಲ್ಲದೆ ಉದ್ಯಾನಗಳ ಬೆಂಚುಗಳಲ್ಲಿ ರಾತ್ರಿ ಕಳೆಯುವುದು ಮುಂಬೈಯಷ್ಟೇ ಸಾಮಾನ್ಯ ದೃಶ್ಯ. ಆ ಶ್ರೀಮಂತ ದೇಶದಲ್ಲಿ 40 ಲಕ್ಷಜನ ವಸತಿಹೀನರಿದ್ದಾರೆ. ಅದೇ ವೇಳೆ ದೇಶದಲ್ಲಿ 50 ಲಕ್ಷಕ್ಕೂ ಹೆಚ್ಚು ಫ್ಲಾಟುಗಳು ಯಾವಾಗಲೂ ತೆರವಾಗಿಯೇ ಇರುತ್ತವೆ. ಬಹುತೇಕ ದುಡಿಯುವ ಜನರ ಆದಾಯದ ಮೂರನೇ ಒಂದು ಭಾಗವನ್ನು ಬಾಡಿಗೆಯೇ ಕಬಳಿಸುತ್ತದೆ.

ನಮ್ಮ ಆಳರಸರ "ಜಗತ್ತು" ಈ ಬಂಡವಾಳಶಾಹೀ ಜಗತ್ತು ಮಾತ್ರ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಲ್ಲ. ಬಂಡವಾಳಶಾಹೀ ರಾಷ್ಟ್ರಗಳಲ್ಲಿ ವಸತಿ ಯೆಂಬುದು ಕೆಲವರಿಗೆ ಲಾಭ ದೋಚುವ ಮತ್ತೊಂದು ದಾರಿಯಷ್ಟೆ. ವಸತಿ ಸಮಸ್ಯೆ ಬಂಡವಾಳಶಾಹೀ ವ್ಯವಸ್ಥೆಯ ಸಾಮಾಜಿಕ ಅನ್ಯಾಯದ ಫಲಿತಾಂಶ. ಇದು ಸ್ಪಷ್ಟವಾಗಿ ತಿಳಿಯುವುದು ಸಮಾಜವಾದಿ ದೇಶಗಳು ಈ ಸಮಸ್ಯೆಯನ್ನು ಹೀಗೆ ಎದುರಿಸುತ್ತಿವೆ ಎಂಬುದನ್ನು ಕಂಡಾಗ.

1872ರಷ್ಟು ಹಿಂದೆಯೇ ಎಂಗೆಲ್ಸ್ ಹೀಗೆ ಬರೆದಿದ್ದರು– "ವಸತಿ ಪ್ರಶ್ನೆಯನ್ನು ಹೇಗೆ ಪರಿಹರಿಸುವುದು ? ಸದ್ಯದ ಸಮಾಜದಲ್ಲಂತೂ ಇತರ ಎಲ್ಲಾ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಿದಂತೆ. ಅಂದರೆ ಕ್ರಮೇಣ ಬೇಡಿಕೆ ಮತ್ತು ಪೂರೈಕೆಯನ್ನು ಸಮಮಟ್ಟಗೊಳಿಸುವುದು. ಆದರೇ ಇದೇ ಪರಿಹಾರವೇ ಅಲ್ಲ, ಯಾಕೆಂದರೆ ಮತ್ತೆ ಮತ್ತೆ ಈ ಪ್ರಶ್ನೆ ಏಳುತ್ತಲೇ ಇರುತ್ತದೆ. ಒಂದು ಸಾಮಾಜಿಕ ಕ್ರಾಂತಿ ಹೇಗೆ ಈ ಪ್ರಶ್ನೆಯನ್ನು ಪರಿಹರಿಸುತ್ತದೆ ? ಇದು ನಿರ್ದಿಷ್ಟ ಪರಿಸ್ಥಿತಿಯನ್ನು ಅವಲಂಬಿಸಿದೆ ಮಾತ್ರವಲ್ಲ, ಹಳ್ಳಿ ಮತ್ತು ಪಟ್ಟಣಗಳ ನಡುವಿನ ವಿರೋಧಭಾವವನ್ನು ಹೇಗೆ ಪರಿಹರಿಸುವುದು ಎಂಬ ಮೂಲಭೂತ ಪ್ರಶ್ನೆಯೂ ಇದರಲ್ಲೇ ಅಡಕವಾಗಿದೆ........ ಆದರೆ ಒಂದು ಮಾತಂತೂ ಖಂಡಿತ. ನ್ಯಾಯಪೂರ್ಣವಾಗಿ ವಿತರಿಸಿದರೆ ಸಮಸ್ತ "ವಸತಿ ಪ್ರಶ್ನೆ" ಯನ್ನು ಪರಿಪರಿಸಲು ಬೇಕಾದಷ್ಟು ಸಂಖ್ಯೆಯ ಮನೆಗಳಂತೂ ದೊಡ್ಡ ನಗರಗಳಲ್ಲಿ ಈಗಲೂ ಇವೆ. ಇದನ್ನು ಸಾಧಿಸಬಹುದಾದ ಸಹಜ ವಿಧಾನವೆಂದರೆ ಈ ಮನೆಗಳ ಈಗಿನ ಮಾಲಕರಿಂದ ಅವನ್ನು ಸ್ವಾಧೀನಪಡಿಸಿಕೊಂಡು ವಸತಿಯಿಲ್ಲದ ಅಥವಾ ಕಿಕ್ಕಿರಿದ ಮನೆಗಳಲ್ಲಿ ವಾಸಿಸುವ ಕಾರ್ಮಿಕರಿಗೆ ಕೊಡುವುದು. ಕಾರ್ಮಿಕವರ್ಗ ರಾಜಕೀಯ ಅಧಿಕಾರ ಗೆದ್ದುಕೊಂಡಾಗ ಸರ್ವರ ಒಳಿತಿನ ಈ ಕ್ರಮ ಕೈಗೊಳ್ಳುವುದು ಸುಲಭ......."

ಕ್ಯೂಬಾದಲ್ಲಿ ಹೀಗೇ ನಡೆಯಿತು. 1960ರಲ್ಲಿ ಆ ಗಣರಾಜ್ಯ ಅಸ್ತಿತ್ವಕ್ಕೆ ಬಂದಾಗ ಈ ಪುಟ್ಟ ದೇಶದ ಗ್ರಾಮ ಹಾಗೂ ನಗರಗಳಲ್ಲಿ 4 ಲಕ್ಷ ಕುಟುಂಬಗಳು ಮೂಲ ಭೂತ ನೈರ್ಮಲ್ಯವಿಲ್ಲದ ಅತ್ಯಂತ ಅನಾ ರೋಗ್ಯಕರ ಬ್ಯಾರಾಕ್‌ಗಳಲ್ಲಿ, ಕೊಳೆಗೇರಿಗಳಲ್ಲಿ ವಾಸವಾಗಿದ್ದರು, ಗ್ರಾಮಾಂತರಗಳಲ್ಲಿ 70% ಜನ ತಾಳೇಗರಿಗಳಿಂದ ಮಾಡಿದ ಮಣ್ಣಿನ ನೆಲದ, ಹಲಗೆಯ ಗೋಡೆಗಳ ಬೋಹಿಯೋ ಎಂಬ ಗುಡಿಸಲುಗಳಲ್ಲಿ ವಾಸವಾಗಿದ್ದರು. ಕ್ರಾಂತಿಯಾದ ತಕ್ಷಣವೇ ಖಾಲಿಯಿದ್ದ ಶ್ರೀಮಂತರ ಫ್ಲಾಟುಗಳಿಗೆ ಕೊಳೆಗೇರಿಯಲ್ಲಿದ್ದ ಕಾರ್ಮಿಕರನ್ನು ವರ್ಗಾಯಿಸಲಾಯಿತು. ಬಾಡಿಗೆಯನ್ನು ಕಡಿಮೆ ಮಾಡಲಾಯಿತು. ಸಮಾಜವಾದಿ ಬದಲಾವಣೆಗಳನ್ನು ಒಂದರಹಿಂದೊಂದರಂತೆ ಕ್ರಮಕ್ರಮವಾಗಿ ಜ್ಯಾರಿಗೊಳಿಸಿದಂತೆ ಸರಕಾರ ವಸತಿ ನಿರ್ಮಾಣವನ್ನು ಅಧಿಕಗೊಳಿಸಲು ಹೆಚ್ಚೆಚ್ಚು ಅವಕಾಶಗಳನ್ನು ಪಡೆಯಿತು. ಫ್ಲಾಟ್‌ಗಳ ಹೊಸ-ಹೊಸ ಬ್ಲಾಕ್‌ಗಳು, ವಸತಿ ಪ್ರದೇಶಗಳು ಸೃಷ್ಟಿಯಾದವು. ಇಂದು ಅಲ್ಲಿ ವಸತಿ ನಿರ್ಮಾಣದ ಉದ್ಯಮ ಹಾಗೂ ಉಪಯುಕ್ತ ದೈನಂದಿನ ಸೇವಾ-ಸೌಲಭ್ಯಗಳಿಗಾಗಿ 1960 ಕ್ಕಿಂತ ಶೇ. 3.7 ಪಟ್ಟು ಹೆಚ್ಚು ಹಣ ಖರ್ಚು ಮಾಡಲಾಗುತ್ತಿದೆ. ಪ್ರತಿ ವರ್ಷ ಸುಮಾರು 25000 ಸುಸಜ್ಜಿತ ಫ್ಲಾಟ್‌ಗಳನ್ನು, ಖಾಸಗಿಯಾಗಿ ಹಾಗೂ ಸಹಕಾರಿ ಸಂಘಗಳ ಮೂಲಕ ಇನ್ನೂ 12 ರಿಂದ 13 ಸಾವಿರ ಫ್ಲಾಟುಗಳನ್ನು ನಿರ್ಮಿಸಲಾಗುತ್ತಿದೆ.

ಸಮಾಜದ ಎಲ್ಲಾ ಸದಸ್ಯರ ಸರ್ವತೋಮುಖ ಅಭ್ಯುದಯದ ಸಾಧನೆಯಲ್ಲಿ ಅಚಲ ವಿಶ್ವಾಸವಿರಿಸಿರುವ ಸಮಾಜವಾದೀ ರಾಷ್ಟ್ರಗಳಲ್ಲಿ ವಸತಿ ಸೌಲಭ್ಯ ಪ್ರತಿಯೊಬ್ಬನ ಹಕ್ಕು ಮಾತ್ರವಲ್ಲ, ಆ ಹಕ್ಕನ್ನು ಖಾತ್ರಿಗೊಳಿಸುವ ಅಗಾಧ ಪ್ರಮಾಣದ ವಸತಿ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ಯಾವುದೇ ಸಮಾಜವಾದೀ ದೇಶದ ಯಾವುದೇ ಸಣ್ಣ ದೊಡ್ಡ ಪಟ್ಟಣದಲ್ಲಿ ಕಾಂಕ್ರೀಟ್ ಚಪ್ಪಡಿಗಳನ್ನು ಹಾಗೂ ಇತರ ಕಟ್ಟಡ ಸಾಮಗ್ರಿಗಳನ್ನು ಹೊತ್ತ ದೊಡ್ಡ–ದೊಡ್ಡ ಟ್ರಕ್‌ಗಳು ಒಂದು ಸಾಮಾನ್ಯ ದೃಶ್ಯವೆಂದು ಪ್ರವಾಸಿಗರು ಬಣ್ಣಿಸುತ್ತಾರೆ. ಪ್ರತಿಯೊಂದು ಕುಟುಂಬಕ್ಕೂ ಸ್ವಯಂ ಪರಿಪೂರ್ಣ ಫ್ಲಾಟ್–ಸಮಾಜವಾದೀ ದೇಶಗಳು ಈ ಧ್ಯೇಯ ಸಾಧನೆಗಾಗಿ ಶ್ರಮಿಸುತ್ತಿವೆ. ವಸತಿ ನಿರ್ಮಾಣಕ್ಕಾಗಿ ಒಟ್ಟು ರಾಷ್ಟ್ರೀಯ ಬಂಡವಾಳದ ಹೂಡಿಕೆಯ 10 ರಿಂದ 2 ಶೇಕಡಾವನ್ನು ವಿನಿಯೋಗಿಸುತ್ತಿವೆ. ವಸತಿ ನಿರ್ಮಾಣದ ಖರ್ಚಿನ ಒಂದು ಭಾಗವನ್ನು ಸರ್ಕಾರಗಳೇ ವಹಿಸುತ್ತಿವೆ.

ಈ ದೇಶಗಳಲ್ಲಿ ಸುಸಜ್ಜಿತ ಫ್ಲಾಟುಗಳ ಬಾಡಿಗೆ ಆದಾಯದ 3 ರಿಂದ 4 ಶೇಕಡಾಕ್ಕಿಂತ ಹೆಚ್ಚಿರುವುದಿಲ್ಲ. ಇದರಿಂದ ಯಾರೇ ಆದರೂ ವರಮಾನದ ತಾರತಮ್ಯವಿಲ್ಲದೆ ಅವಶ್ಯಕ ವಸತಿ ಸೌಕರ್ಯಪಡೆಯಲು ಸಾಧ್ಯವಾಗುತ್ತಿದೆ. ಸೋವಿಯತ್ ಒಕ್ಕೂಟದಲ್ಲಿ 1928 ರಿಂದಲೂ ಬಾಡಿಗೆ ದರ ಹೆಚ್ಚಿಲ್ಲ. ಸ್ವಂತ ಮನೆ ಅಥವಾ ಫ್ಲಾಟ್ ಹೊಂದಲು ದೀರ್ಘಾವಧಿಯ ಸಾಲಗಳನ್ನು ಕೇವಲ 2 ರಿಂದ 3% ಬಡ್ಡಿ ದರದಲ್ಲಿ ನೀಡಲಾಗುತ್ತಿದೆ. ಸಾಲದ ಒಂದು ಭಾಗವನ್ನು ಆಯಾಯ ವ್ಯಕ್ತಿಗಳು ದುಡಿಯುತ್ತಿರುವ ಸರಕಾರೀ ಉದ್ಯಮಗಳು ಹಾಗೂ ಸಾಮೂಹಿಕ ಕೃಷಿ ಕ್ಷೇತ್ರಗಳು ಮರುಪಾವತಿ ಮಾಡುತ್ತವೆ. ವಸತಿ ನಿರ್ಮಾಣ ಸಹಕಾರೀ ಸಂಘಗಳಿಗೆ ನಿರ್ಮಾಣದ ಬಹುಭಾಗ ವೆಚ್ಚವನ್ನು ಭರಿಸುವಂತಹ ಸಾಲಗಳನ್ನು ಒದಗಿಸಲಾಗುತ್ತಿದೆ. ನವವಿವಾಹಿತರಿಗೆ ವಿಶೇಷವಾಗಿ ಕೆಲವು ಫ್ಲಾಟುಗಳನ್ನು ಮೀಸಲಿಟ್ಟು ಬಡ್ಡಿ ರಹಿತ ಸಾಲ ನೀಡಲಾಗುತ್ತಿದೆ.

ಸಮಾಜದ ಒಟ್ಟು ಯೋಜಿತ ಅಭಿವೃದ್ಧಿಯಿಂದಾಗಿ ಕೃಷಿ ಮತ್ತು ಕೈಗಾರಿಕೆಯಲ್ಲಿನ, ಹಳ್ಳಿ ಮತ್ತು ಪಟ್ಟಣಗಳಲ್ಲಿನ ತಾರತಮ್ಯವಂತೂ ಮಾಯವಾಗುತ್ತಿದೆ. ಒಟ್ಟಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯ ವಸತಿಯ ಅಗತ್ಯವನ್ನು ಈಡೇರಿಸುವ ಹೊಣೆಯನ್ನು ದುಡಿಯುವ ಜನರ ಪ್ರಭುತ್ವದ ಈ ಸರಕಾರಗಳು ತಾವೇ ಹೊತ್ತು ಅದನ್ನ ಸಮರ್ಥವಾಗಿ ನಿಭಾಯಿಸುತ್ತಿವೆ, ನಮ್ಮಂತಹ ದೇಶಗಳ ದುಡಿಯುವ ಜನರ ಮುಂದೆ ಮೂರ್ತ ಉದಾಹರಣೆಗಳನ್ನೇ ಇಟ್ಟಿವೆ.

> ಒಂದು ಸಮಾಜವನ್ನು ತೂಗುವುದು ಅದರ ಅತ್ಯಂತ ಶ್ರೀಮಂತ ಹಾಗೂ ಭಾಗ್ಯಶಾಲೀ ಸದಸ್ಯರು ಗಳಿಸಿರುವ ಮಟ್ಟದಿಂದಲ್ಲ, ಬದಲಾಗಿ ಅದು ತನ್ನ ಅತ್ಯಂತ ದುರ್ಬಲ ನಾಗರಿಕರಿಗೆ ಯಾವ ಮಟ್ಟದ ಜೀವನವನ್ನು ಕಲ್ಪಿಸಿದೆ ಎಂಬುದರ ಮೇಲೆ ಎಂಬುದನ್ನು ಮರೆಯದಿರೋಣ.... ಸಮಸ್ಯೆ ಬಿಕ್ಕಟ್ಟಿನ ರೂಪ ಪಡೆಯುತ್ತಿದೆ. ಮುಂಬರುವ ದಶಕಗಳಲ್ಲಿ ಅದು ರಾಕ್ಷಸಾಕಾರ ತಳೆಯಬಹುದು. ಈಗ ತಕ್ಷಣ ದಿಟ್ಟ, ಅವ್ಯಾಹತ ಹಾಗೂ ಸೃಜನಶೀಲ ಕಾರ್ಯಾಚರಣೆಗಳಷ್ಟೇ ಸದ್ಯದ ಒತ್ತಡಗಳಿಂದ, ಭವಿಷ್ಯದ ಬರಸಿಡಿಲಿನಿಂದ ಪರಿಹಾರ ಕೊಡಬಲ್ಲವು."
>
> ವಸತಿ ವರ್ಷವನ್ನು ಉದ್ಘಾಟಿಸುತ್ತಾ
> ವಿಶ್ವಸಂಸ್ಥೆ ಪ್ರಧಾನಕಾರ್ಯದರ್ಶಿ ಪೆರೆಸ್ ಡಿಕ್ಯೂಲರ್

ಐ. ಎಂ. ಎಫ್. ಸೆರೆಯಾಳುಗಳು ಮಾಡಬಲ್ಲರೇ ?

ವಸತಿ ಸಮಸ್ಯೆಗೆ ಪರಿಹಾರವೇ ಇಲ್ಲವೇ ? ನಗರ ಹಾಗೂ ಪ್ರಾದೇಶಿಕ ಯೋಜನಾ ಪರಿಣತರು ಈ ಬಗ್ಗೆ ಹಲವಾರು ಅಧ್ಯಯನಗಳನ್ನು ನಡೆಸಿ ಸಲಹೆ–ಸೂಚನೆ ನೀಡಿದ್ದಾರೆ. ಮುಖ್ಯವಾಗಿ ಸಾಮಾಜಿಕ ಪ್ರಾಮುಖ್ಯತೆಯ ಈ ಸಮಸ್ಯೆಯ ಬಗ್ಗೆ ಒಂದು "ರಾಷ್ಟ್ರೀಯ ವಸತಿ ನೀತಿ" ರೂಪಿಸುವುದು ಅಗತ್ಯವೆಂದು ಅವರು ಹೇಳುತ್ತಾರೆ. ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸುವುದು, ವ್ಯಾಪಕ ಪ್ರಮಾಣದಲ್ಲಿ ಸಂಪನ್ಮೂಲಗಳ ಸೂಕ್ತ ಬಳಕೆಯ ಮೂಲಕ ಸಾಮೂಹಿಕ ವಸತಿ ನಿರ್ಮಾಣ (ವಿಶೇಷವಾಗಿ ಸಬ್ಸಿಡಿಗಳ ಮೂಲಕ ಗ್ರಾಮಾಂತರಗಳ ಹಾಗೂ ನಗರಗಳ ಆರ್ಥಿಕವಾಗಿ ದುರ್ಬಲರಾಗಿರುವವರಿಗೆ), ಗೃಹ ಮಂಡಳಿಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು ಚುರುಕಿನಿಂದ ಕೆಲಸ ಮಾಡುವಂತೆ ಮಾಡುವುದು, ಅಲ್ಲಿನ ಭ್ರಷ್ಟಾಚಾರ, ಅದಕ್ಷತೆ ತಡೆಯಲು ಈ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ ಸಂಬಂಧಪಟ್ಟ ಜನವಿಭಾಗಗಳ ಅಂದರೆ ಕಾರ್ಮಿಕರ, ನೌಕರರ ಪ್ರತಿನಿಧಿಗಳ ನಿಯಂತ್ರಣ, ಜನತೆಯ ಪ್ರತಿನಿಧಿಗಳ ಉಸ್ತುವಾರಿಸಮಿತಿಗಳು, ಸ್ವಂತ ಮನೆ ಅಥವಾ ಫ್ಲಾಟ್ ಹೊಂದಲು ಕಡಿಮೆ ಬಡ್ಡಿದರದಲ್ಲಿ ದೀರ್ಘಾವಧಿಯ ಸಾಲ ಸೌಲಭ್ಯ, ಜಮೀನಿನ ಸಟ್ಟಾವ್ಯವಹಾರ ತಡೆಯಲು ಖಾಲಿ ನಿವೇಶನಗಳ ಮೇಲೆ ತೆರಿಗೆ ಹಾಗೂ ಇತರ ಕ್ರಮಗಳು ಈ ರಾಷ್ಟ್ರೀಯ ನೀತಿಯ ಅನಿವಾರ್ಯ ಅಂಶಗಳಾಗಬೇಕು.

ಗ್ರಾಮಾಂತರದಲ್ಲಿ ಬಡಜನರು, ಭೂಹೀನರು ಈಗಾಗಲೇ ವಾಸವಾಗಿರುವ ಜಮೀನಿನ ಹಕ್ಕುಪತ್ರವನ್ನು ಅವರವರಿಗೇ ನೀಡಿ ಅದನ್ನು ಖಾಯಂಗೊಳಿಸುವುದು ಹಾಗೂ ತ್ರಿಪುರಾ ಸರಕಾರ ಗಾಮಾಂತರಗಳಲ್ಲಿ ಸ್ಥಳೀಯ ಸಾಮಗ್ರಿಗಳನ್ನೇ ಉಪಯೋಗಿಸಿಕೊಂಡು ಕಡಿಮೆ ಖರ್ಚಿನ ಸಾಮೂಹಿಕ ವಸತಿ ಯೋಜನೆ ರೂಪಿಸಿದಂತೆ ಸೂಕ್ತ ಸಂಶೋಧನೆಗಳ ಮೂಲಕ ಅಂತಹ ಯೋಜನೆಗಳನ್ನು ರೂಪಿಸಬೇಕು.

ಉದ್ದಿಮೆಗಳ ಸ್ಥಾಪನೆ ಸಮಗ್ರ ಪ್ರಾದೇಶಿಕ ಯೋಜನೆಯ ಅಂಗವಾಗಿ ಬಂದರೆ ಈಗಿರುವ ನಗರಗಳ ಮೇಲೆ ಒತ್ತಡ ಹೆಚ್ಚುವುದನ್ನು ತಡೆಯಬಹುದು. ಜತೆಗೆ ಹೊಸ ಉದ್ದಿಮೆಗಳಿಗೆ ಲೈಸೆನ್ಸ್ ನೀಡುವಾಗ ಸಂಬಂಧಪಟ್ಟ ಕಾರ್ಮಿಕರಿಗೆ ವಸತಿ ಸೌಲಭ್ಯ ಒದಗಿಸಬೇಕೆಂದು ಕಡ್ಡಾಯ ಮಾಡಬೇಕು.

ವಸತಿ ನಿರ್ಮಾಣ ಒಂದು ಅತ್ಯಂತ ಕಡಿಮೆ ವಿದೇಶಿ–ವಿನಿಮಯ ಅಂಶವನ್ನುಳ್ಳ, ಹಣದುಬ್ಬರಕ್ಕೆ, ಅವಕಾಶ ನೀಡದ, ಲಕ್ಷಾಂತರ ನಿರುದ್ಯೋಗಿಗಳು ಹಾಗೂ ಅರೆ ಉದ್ಯೋಗಿಗಳಿಗೆ ಉದ್ಯೋಗ ನೀಡಬಹುದಾದ ಜತೆಗೆ ರಾಷ್ಟ್ರೀಯ ಸೊತ್ತುಗಳ ಭಂಡಾರವನ್ನು ಹೆಚ್ಚಿಸಬಲ್ಲ ಒಂದು ದೊಡ್ಡ ಉದ್ಯಮವಾಗಿಸಲು ಸಾಧ್ಯ ಎಂದೂ ಪರಿಣತರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಸಾರ್ವಜನಿಕ ವಲಯ ಇದರಲ್ಲಿ ಸಕ್ರಿಯ ಪಾತ್ರವಹಿಸುವಂತೆ ಮಾಡಬೇಕು.

ಆದರೆ ದೊಡ್ಡ ಪ್ರಶ್ನೆ – ರಾಜೀವ ಗಾಂಧಿ ಸರಕಾರ ಇಂತಹ ಒಂದು ಧೋರಣೆ ತಳೆಯುವುದೇ ? ತನ್ನ ಹೊಸ ಆರ್ಥಿಕ ನೀತಿ ಹೊಸ ಜವಳಿ ನೀತಿ ಮೂಲಕ ಸಾರ್ವಜನಿಕ ವಲಯವನ್ನು ಮುರಿಯಲು ಹವಣಿಸುತ್ತಿರುವ, ಹೊಸ ಶಿಕ್ಷಣ ನೀತಿಯ ಕೇವಲ ಕೆಲವರಿಗೇ ಶಿಕ್ಷಣ ಹಾಗೂ ಉದ್ಯೋಗಗಳನ್ನು ಕಾದಿರುಸುತ್ತಿರುವ ಸರಕಾರ ದುಡಿಯುವ ಜನರನ್ನು ಗಮನದಲ್ಲಿಟ್ಟುಕೊಳ್ಳುವ ಒಂದು ನೀತಿಯನ್ನು ಅಂಗೀಕರಿಸಬಲ್ಲುದೇ ?

ಭಾರತದಂತಹ ದೇಶಗಳು ತಮ್ಮ ವಿದೇಶೀ ವಿನಿಮಯದ ಕೊರತೆ ತುಂಬಲು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲಗಳಿಗೆ ಪ್ರತಿಯಾಗಿ ತಮ್ಮ ಧೋರಣೆಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಒತ್ತಡ ಎದುರಿಸಬೇಕಾಗುತ್ತದೆ. ಇದರಿಂದ ಎರಡು ರೀತಿಯ ದುಷ್ಪರಿಣಾಮಗಳಾಗುತ್ತವೆಂದು ವಿಶ್ವಸಂಸ್ಥೆಯ ತಜ್ಞರು ತೃತೀಯ ಜಗತ್ತಿನ ದೇಶಗಳ ಅನುಭವಗಳ ಆಧಾರದ ಮೇಲೆ ದಾಖಲು ಮಾಡಿಕೊಂಡಿದ್ದಾರೆ, ಮೊದಲನೆಯದಾಗಿ ಇಂತಹ ಹೊಂದಾಣಿಕೆಗಳಿಗೆ ಮೊಟ್ಟಮೊದಲು ಬಲಿಯಾಗುವುದು ಸಾಮೂಹಿಕ ವಸತಿ ನಿರ್ಮಾಣದಂತಹ ಸಾರ್ವಜನಿಕ ಖರ್ಚಿನ, ಸಬ್ಸಿಡಿಯ ಸಾಮಾಜಿಕ ಯೋಜನೆಗಳ ಬಾಬ್ತು; ಎರಡನೆಯದಾಗಿ, ಈ 'ಹೊಂದಾಣಿಕೆ'ಗಳ ಫಲವಾಗಿ ಉಂಟಾಗುವ ನಿರುದ್ಯೋಗದ ಪರಿಸ್ಥಿತಿಯಲ್ಲಿ ಜನಸಾಮಾನ್ಯರ ಆದಾಯದಲ್ಲುಂಟಾಗುವ ಕಡಿತದಿಂದಾಗಿ ವಸತಿ ಸಮಸ್ಯೆಯ ಉಲ್ಬಣ. 5000 ಕೋಟಿ ರೂ.ಗಳ ಐ. ಎಂ. ಎಫ್. ಸಾಲ ಪಡೆದಿರುವ ಕಾಂಗ್ರೆಸ್ (ಐ) ಸರಕಾರ ಇದಕ್ಕಿಂತ ಭಿನ್ನವಾದ ನಿಲುವು ತಳೆಯಬಲ್ಲುದೇ ?

....ಮಾಡು ಸಿಕ್ಕದಲ್ಲಾ ! ಮಾಡಿನ ಜಾಡು ಸಿಕ್ಕದಲ್ಲಾ !

ಸೂರಿನ ವರ್ಷ ಆರಂಭವಾಗಿದೆ. ಜನವರೀ ರಂದು ನಿರ್ವಸಿತರಿಗೆ ವಸತಿಯ ಅಂತರ್ರಾಷ್ಟ್ರೀಯ ವರ್ಷವನ್ನು ಉದ್ಘಾಟಿಸುತ್ತಾ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ವಿಶ್ವದಲ್ಲಿ ಪ್ರತಿ ಐವರಲ್ಲಿ ಒಬ್ಬರು ಮಾನವ ಯೋಗ್ಯವಲ್ಲದ ಗೂಡುಗಳಲ್ಲಿ ಜೀವಿಸುತ್ತಿದ್ದಾರೆ ಎಂದಿದ್ದಾರೆ. ಇವರಲ್ಲಿ ಸುಮಾರು 10 ಕೋಟಿ ಜನಕ್ಕೆ ತೆರೆದ ಆಕಾಶವೇ ಮಾಡು. ಮಾನವಕುಲದ ಒಂದು ಪ್ರಮುಖ ಸಮಸ್ಯೆಯತ್ತ ವಿವಿಧ ಸರಕಾರಗಳ, ವಿಶೇಷವಾಗಿ ಭಾರತದಂತಹ ಮೂರನೇ ಜಗತ್ತಿನ ಸರಕಾರಗಳ ಗಮನ ಸೆಳೆಯುವ ಉದ್ದೇಶದಿಂದ ಈ ವರ್ಷಾಚರಣೆಗೆ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಕರೆ ನೀಡಿತ್ತು.

ಭಾರತದ ದುಡಿಯುವ ಜನಗಳಿಗೆ, ತಮ್ಮ ಆದಾಯದ ಕಾಲಂಶದಿಂದ ಮೂರನೇ ಒಂದಂಶವನ್ನು ಮನೆ ಬಾಡಿಗೆಗಾಗಿಯೇ ಮೀಸಲಿಡಬೇಕಾದ ಮತ್ತು ಸಾವಿರಾರು ರೂಪಾಯಿಗಳ ಅಡ್ವಾನ್ಸ್ ಕೊಡಬೇಕಾಗಿರುವ ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದ ನೌಕರರು ಮತ್ತು ಕಾರ್ಮಿಕರಿಗೆ, ಸಾಧಾರಣ ಮಳೆ-ಗಾಳಿಯಿಂದಲೂ ರಕ್ಷಣೆ ಕೊಡಲಾರದ ಕಚ್ಚಾ ಗುಡಿಸಲುಗಳಲ್ಲಿ ವಾಸಿಸುವ ಬಡ ರೈತರು ಹಾಗೂ ಕೃಷಿ ಕಾರ್ಮಿಕರಿಗೆ ವಸತಿ ಎಂಬುದು ಪರಿಹಾರವೇ ಇಲ್ಲದ ಸಮಸ್ಯೆಯೇನೋ ಎಂದನಿಸುತ್ತಿದೆ.

ಕೆಲವು ಅಂಕಿ ಅಂಶಗಳನ್ನು ನೋಡಿ ಭಾರತದಲ್ಲಿ 5ನೇ ಯೋಜನೆಯ ಅಂತ್ಯದ ವೇಳೆಗೆ ಒಟ್ಟು 1 ಕೋಟಿ 56 ಲಕ್ಷ ಮನೆಗಳ - ನಗರಗಳಲ್ಲಿ 38 ಲಕ್ಷ ಮನೆಗಳಾದರೆ, ಗ್ರಾಮಾಂತರದಲ್ಲಿ 1 ಕೋಟಿ 18 ಲಕ್ಷ ಮನೆಗಳ - ಕೊರತೆಯಿತ್ತು. ಈ ಕೊರತೆ ಕಡಿಮೆಯಾಗುವ ಬದಲು ದಿನೇದಿನೇ ಹೆಚ್ಚುತ್ತಲೇ ಇದೆ. ವಿಶ್ವಸಂಸ್ಥೆಯ ಪ್ರಕಾರ ಭಾರತದ ವಸತಿ ಸಮಸ್ಯೆ ನೀಗಬೇಕಾದರೆ ಪ್ರತಿವರ್ಷ ಒಂದು ಸಾವಿರ ಜನಸಂಖ್ಯೆಗೆ ಹತ್ತು ಮನೆಗಳಂತೆ ಕಟ್ಟಬೇಕಾಗುತ್ತದೆ. ಆದರೆ ಭಾರತದಲ್ಲಿ ಈಗಿನ ದರ ಪ್ರತಿ ಸಾವಿರಕ್ಕೆ ಕೇವಲ ಎರಡು ಮನೆಗಳು !

ನಗರಗಳಲ್ಲಿ ಈಗ ಪ್ರತಿ ಹತ್ತರಲ್ಲಿ ಮೂವರಿಗೆ ಸರಿಯಾದ ವಸತಿ ಸೌಲಭ್ಯವಿಲ್ಲ. ರಾಜೀವ ಗಾಂಧಿಯವರ 21ನೇ ಶತಮಾನಕ್ಕೆ ನೆಗೆಯುವ ಹೊತ್ತಿಗೆ ನಗರಗಳಲ್ಲಿ ಮನೆಗಳ ಕೊರತೆ ನಾಲ್ಕು ಪಟ್ಟಾಗುತ್ತದೆ; ಅರ್ಧದಷ್ಟು ನಗರವಾಸಿಗಳು ಸರಿಯಾದ ವಸತಿ ಸೌಲಭ್ಯವಿಲ್ಲದೆ ನರಳಬೇಕಾಗುತ್ತದೆ-ಇದು ತಜ್ಞರ ಎದೆ ನಡುಗಿಸುವ ಅಂದಾಜು.

ವಿಶ್ವಸಂಸ್ಥೆ ಹಾಕಿರುವ ಲೆಕ್ಕಾಚಾರದ ಪ್ರಕಾರ 22-24ಚದರ ಮೀಟರ್ ಕೋಣೆ, 2-3 ಚಂದರ ಮೀಟರ್ ವರಾಂಡಾ ಹಾಗೂ 4-5 ಚದರ ಮೀಟರ್ ಬಚ್ಚಲ್-ಪಾಯಿಖಾನೆ ಒಂದು ಕುಟುಂಬಕ್ಕೆ ಕನಿಷ್ಟ ಆವಶ್ಯಕತೆ. ನಮ್ಮ ದೇಶದ 65% ಜನಕ್ಕೆ ಈ ಕನಿಷ್ಟ ಸೌಲಭ್ಯವೂ ಇಲ್ಲ.

ವಸತಿ ಸಮಸ್ಯೆ ಹೀಗೆ ಉಲ್ಬಣಗೊಳ್ಳುತ್ತಿರುವುದೇಕೆ? ಜನ ಹೆಚ್ಚೆಚ್ಚು ಸಂಖ್ಯೆಯಲ್ಲಿ ನಗರಗಳತ್ತ ಬರುವುದು ಹಾಗೂ ಹೆಚ್ಚೆಚ್ಚು ಕೈಗಾರಿಕೆಗಳ ಸ್ಥಾಪನೆ ಮುಖ್ಯ ಕಾರಣವೆನ್ನಲಾಗುತ್ತಿದೆ. ಸ್ವಲ್ಪ ಮಟ್ಟಿಗೆ ನಗರಗಳಲ್ಲಿ ಇದು ನಿಜವಾದರೂ ಗ್ರಾಮಾಂತರಗಳಲ್ಲೇಕೆ 1 ಕೋಟಿ 18 ಲಕ್ಷ ಮನೆಗಳ ಅಭಾವ? ವಾಸ್ತವವಾಗಿ ಸ್ವಾತಂತ್ರ್ಯ ನಂತರ ನಮ್ಮ ಆಳರಸರು ಹಿಡಿದ ಬಂಡವಾಳಶಾಹಿ ದಾರಿಯೇ ಈ ಉಲ್ಬಣಕ್ಕೆ ಪ್ರಮುಖ ಕಾರಣವೆನ್ನಬೇಕು.

ಜನ ನಗರಗಳತ್ತ ಏಕೆ ಬರುತ್ತಾರೆ? ಮುಂಬೈಯಲ್ಲಿ ಈ ಬಗ್ಗೆ ನಡೆಸಿದ ಒಂದು ಸಮೀಕ್ಷೆ ಪ್ರಕಾರ ಇವರಲ್ಲಿ ನೂರರಲ್ಲಿ 57 ಜನಕ್ಕೆ ತಮ್ಮ ಊರುಗಳಲ್ಲಿಯಾವುದೇ ಚರ-ಸ್ಥಿರ ಆಸ್ತಿಯಿಲ್ಲ; 27 ಜನಕ್ಕೆ ಇರುವುದು ಕೇವಲ ಒಂದು ಗುಡಿಸಲು. ಎರಡು ಎಕ್ರೆಗಿಂತ ಕಡಿಮೆ ಜಮೀನಿದ್ದವರು 18 ಶೇಕಡಾ ಇವರು ಭೂಹೀನರಿಗಿಂತ ತುಸು ಉತ್ತಮ ದಷ್ಟೆ. ನಿರ್ವಾಹವಿಲ್ಲದೆ ಗ್ರಾಮಾಂತರ ಬಡವರು ನಗರ ಬಂದು ಸೇರುತ್ತಾರೆ-ನಗರದ ಬಹುಮುಖ ಆರ್ಥಿಕ ಚಟುವಟಿಕೆಗಳಲ್ಲಿ ಎಲ್ಲಾದರೊಂದು ಮೂಲೆಯಲ್ಲಿ ಹೊಟ್ಟೆ ಹೊರೆಯುವುದು ಸಾಧ್ಯವಾಗಬಹುದೆಂಬ ಆಸೆಯಿಂದ.

ಆರು ಯೋಜನೆಗಳು ಹಳ್ಳಿಗಳಲ್ಲಿನ ಭೂಕೇಂದ್ರೀಕರಣವನ್ನು ಊಳಿಗಮಾನ್ಯ ಸಂಬಂಧಗಳನ್ನು ಒಡೆಯುವಲ್ಲಿ ವಿಫಲಗೊಂಡಿವೆ. ಮಾತ್ರವಲ್ಲ, ರೈತರ ಬೆಳೆಗಳಿಗೆ ನ್ಯಾಯವಾದ ಬೆಲೆ ನೀಡುವುದರಲ್ಲೂ ವಿಫಲಗೊಂಡಿವೆ. ಇದರಿಂದ ಬಡರೈತರು ಮತ್ತು ಕೃಷಿಕಾರ್ಮಿಕರಂತೂ ಕಂಗಾಲಾಗಿದ್ದಾರೆ. ಮಧ್ಯಮ ರೈತರೂ ವಿಲಿವಿಲಿ ಒದ್ದಾಡುತ್ತಿದ್ದಾರೆ. ನಾಗಾಲೋಟದಲ್ಲಿರುವ ಹಣದುಬ್ಬರ ಹಳ್ಳಿ-ಪಟ್ಟಣಗಳೆಂಬ ಭೇದವಿಲ್ಲದೆ ಎಲ್ಲಾ ದುಡಿಯುವ ಜನರನ್ನು ಕಿತ್ತು ತಿನ್ನುತ್ತಿದೆ. ಈ ಪರಿಸ್ಥಿತಿಯಲ್ಲಿ ಸೂರಿನ ಸಮಸ್ಯೆ ಉಲ್ಬಣಗೊಳ್ಳದೆ ಇನ್ನೇನಾಗಲು ಸಾಧ್ಯ ?

ಈಗಲೂ ನಮ್ಮ ಹಳ್ಳಿಗಳಲ್ಲಿಶಿಕ್ಷಣ, ವೈದ್ಯಕೀಯ ಸೇವೆ ಮುಂತಾದ ಮೂಲಭೂತ ಅಗತ್ಯಗಳ ಅಭಾವ ಕೂಡಾ ಹಳ್ಳಿಯ ಜನ ನಗರಗಳತ್ತ ನೋಡುವಂತೆ ಮಾಡಿವೆ.

ನಗರಗಳ ಮೇಲೆ ಹೆಚ್ಚಿನ ಒತ್ತಡ, ಪರಿಣಾಮವಾಗಿ ವಸತಿಗೆ ವಿಪರೀತ ಬೇಡಿಕೆ, ಪೂರೈಕೆ ಕಡಿಮೆ. ಬಂಡವಾಳಶಾಹಿಯ ಬೇಡಿಕೆ-ಪೂರೈಕೆಯ ಕಾಡು "ನಿಯಮ" ಕೆಲಸ ಮಾಡಲಾರಂಭಿಸುತ್ತದೆ. ಹಣದುಬ್ಬರ ಅದಕ್ಕೆ ತುಪ್ಪ ಸುರಿಯುತ್ತದೆ. ನಡುವೆ ಅಭಾವವನ್ನೇ ಬಂಡವಾಳ ಮಾಡಿಕೊಂಡು ಲಾಭ ದೋಚುವ ದಳ್ಳಾಳಿಗಳು ಪ್ರವೇಶಿಸುತ್ತಾರೆ ಮನೆ ನಿವೇಶನಗಳ ಬೆಲೆ ಗಗನಕ್ಕೇರುತ್ತದೆ. ಮನೆ ಕಟ್ಟುವ ಖರ್ಚು ಕೂಡಾ, ಸಹಜವಾಗಿಯೇ ಮನೆಬಾಡಿಗೆ, ಅಡ್ವಾನ್ಸ್‌ಗಳ ಮೊತ್ತ ದುಡಿಯುವ ಜನಸಾಮಾನ್ಯರ ಸಾಮರ್ಥ್ಯವನ್ನು ದಾಟಿಹೋಗುತ್ತದೆ. ಸ್ವಂತ ಮನೆಕಟ್ಟಿಕೊಳ್ಳುವುದಂತೂ ಕನಸೇ ಆಗಿಬಿಡುತ್ತದೆ. ನಗರಗಳಲ್ಲಿ ಸ್ವಂತ ಮನೆ ಹೊಂದುವ ಸಾಮರ್ಥ್ಯವಿರುವವರು ಕೇವಲ ಶೇ. 12 ಎಂದ ಒಂದು ಅಧ್ಯಯನ ಕಂಡುಹಿಡಿದಿದೆ.

ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಒಂದು ರಾಷ್ಟ್ರೀಯ ವಸತಿ ನೀತಿ ಇದುವರೆಗೂ ರೂಪಿಸದಿರುವುದು ಕೂಡಾ ಸಮಸ್ಯೆ ಇಷ್ಟು ತೀವ್ರವಾಗಲು ಕಾರಣ ಎಂದು ನಗರ ಯೋಜನಾ ತಜ್ಞರ ಅಭಿಪ್ರಾಯ. ಲಾಭವೇ ಗುರಿಯಾಗಿರುವ ಖಾಸಗೀ ಬಂಡವಾಳ ಶಾಹಿಗಳು ತಮ್ಮ ಕಾರ್ಮಿಕರಿಗೆ ವಸತಿ ಸೌಲಭ್ಯವನ್ನು ಕಡ್ಡಾಯವಾಗಿ ನೀಡುವಂತೆ ಸರ್ಕಾರ ವಿಧಿಸಿಲ್ಲ. ಸರ್ಕಾರದ ಅರೆಮನಸ್ಸಿನ ಪ್ರಯತ್ನಗಳು ಸಮಸ್ಯೆಯ ಅಂಚನ್ನು ಕೂಡಾ ತಲುಪಿಲ್ಲ. ಗೃಹಮಂಡಳಿಗಳು, ಜನತಾ ಮನೆ ಯೋಜನೆಗಳಲ್ಲಿನ ಅದಕ್ಷತೆ, ಭ್ರಷ್ಟಾಚಾರ, ಅನಗತ್ಯ ವಿಳಂಬ ಸೃಷ್ಟಿಸಿರುವುದು ಈಗಲೋ ಮತ್ತೇನೋ ಎನ್ನುವ ಮನೆಗಳನ್ನಷ್ಟೆ.

ಸರ್ಕಾರದ ಯೋಜನೆಗಳಲ್ಲಂತೂ ವಸತಿ ಪ್ರಶ್ನೆಯ ಆದ್ಯತೆ ಹೆಚ್ಚುವ ಬದಲು ಕಡಿಮೆಯಾಗುತ್ತಾ ಬಂದಿದೆ. ಮೊದಲ ಯೋಜನೆಯಲ್ಲಿ ಒಟ್ಟು ಸಾರ್ವಜನಿಕ ಬಂಡವಾಳ ಹೂಡಿಕೆಯ 16% ನ್ನು ವಸತಿ ಪೂರೈಕೆಗಾಗಿ ಇಟ್ಟಿದ್ದರ ನಂತರದ ಯೋಜನೆಗಳಲ್ಲಿ ಇದು ಅನುಕ್ರಮವಾಗಿ 8%, 7%, 5%, ಹೀಗೆ ಇಳಿಯುತ್ತಾ ಬಂದಿದೆ.

ಪಾಶ್ಚಿಮಾತ್ಯ ದೇಶಗಳು ತಮ್ಮ ಹೆಚ್ಚಿನ ಮಟ್ಟದ ರಾಷ್ಟ್ರೀಯ ಉತ್ಪಾದನೆಯ 3.6%, ದಿಂದ 7.6% ದವರೆಗೆ ವಸತಿ ಪೂರೈಕೆಗೆ ಮೀಸಲಿಡುತ್ತಿವೆಯಂತೆ. ಸಮಾಜವಾದಿ ದೇಶಗಳಲ್ಲಂತೂ ಇದು ಕನಿಷ್ಟ 10% ವಾಗಿರುತ್ತದೆ. ಆದರೆ ನಮ್ಮ ದೇಶದಲ್ಲಿ ಕಡಿಮೆ ಮಟ್ಟದಲ್ಲಿರುವ ನಮ್ಮ ಒಟ್ಟು ರಾಷ್ಟ್ರೀಯ ಉತ್ಪಾದನೆಯ 1%-2% ಮಾತ್ರ ವಸತಿ ಪೂರೈಕೆಗೆ ಬಳಸಲ್ಪಡುತ್ತಿದೆ.

ಹೀಗೇಕೆ ? ತಟ್ಟನೆ ಬರುವ ಉತ್ತರ ಸಂಪನ್ಮೂಲಗಳ ತೀವ್ರ ಅಭಾವ-ಆದರೆ ಈ ಅಭಾವವಾದರೂ ಏಕೆ ? ಇಲ್ಲೇ ನಮ್ಮ ಆಳರಸರ ವರ್ಗಸ್ವಭಾವದ ಅರಿವು ನಮಗಾಗುವುದು. ನಾಲ್ಕು ದಶಕಗಳ ಪ್ರಗತಿಯ ಸಿಂಹಪಾಲನ್ನು ಪಡೆದ ಮೇಲಣ ವರ್ಗಗಳಿಂದ ನೇರ ತೆರಿಗೆಗಳ ಮೂಲಕ ಸಂಪನ್ಮೂಲಗಳನ್ನು ಕೇಂದ್ರೀಕರಿಸುವುದು ಹಿಂಜರಿಯುವ ಬೂರ್ಜ್ವಾ ಭೂಮಾಲಕರ ಸರಕಾರ ಪರೋಕ್ಷ ತೆರಿಗೆಗಳ ಮೂಲಕ ದುಡಿಯುವ ಜನರಿಂದ, ಕೊರತೆ ಬಜೆಟ್‌ನಿಂದಲೇ ತನ್ನ ಕೆಲಸ ನಿರ್ವಹಿಸಲು ಪ್ರಯತ್ನಿಸುತ್ತಾ ಬಂದಿದೆ. ಸಾಲದ್ದಕ್ಕೆ ಶ್ರೀಮಂತರು ಅನೀತಿಯುತವಾಗಿ ಗಳಿಸಿ ಬಚ್ಚಿಟ್ಟ, ವಿದೇಶಿ ಬ್ಯಾಂಕುಗಳಲ್ಲಿ ಪೇರಿಸಿಟ್ಟ ಕಪ್ಪು ಹಣಕ್ಕೆ "ಕ್ಷಮಾದಾನ"ದ ಹೆಸರಿನಲ್ಲಿ ಬಹುಮಾನ ಬೇರೆ ! ಈ ನೀತಿಯೇ ವಸತಿ ಪೂರೈಕೆಯ ಕ್ಷೇತ್ರದಲ್ಲೂ ಪ್ರತಿಫಲನಗೊಂಡು "ಒಂದೆಡೆ ಸಂಪನ್ಮೂಲಗಳ ಅಭಾವ, ಇನ್ನೊಂದೆಡೆ ಇರುವ ಸಂಪನ್ಮೂಲಗಳನ್ನು ಸೂಕ್ತವಾಗಿ, ಹೆಚ್ಚಿನ ಜನಕ್ಕೆ ಉಪಯೋಗವಾಗುವ ರೀತಿಯಲ್ಲಿ ಬಳಸದಿರುವುದು. ಭವ್ಯ ಮಹಲುಗಳ ಮೇಲೆ ನಿರ್ಬಂಧವಿಲ್ಲ, ನಿವೇಶಗಳ ಗಾತ್ರದ ಮೇಲೂ ಮಿತಿಯಿಲ್ಲ. ಅತ್ತ 90% ಜನರೂ ತಲೆಯ ಮೇಲೊಂದು ಸೂರು ಒದಗಿಸುವ ಅಗತ್ಯವನ್ನು ಉಪೇಕ್ಷಿಸಲಾಗಿದೆ" ಎಂದೊಬ್ಬ ನಗರ ಯೋಜನಾ ಪರಿಣಿತರುಹಲುಬುವಂತಾದರೆ, ಭಾರತದ ವಾಸ್ತು ಶಿಲ್ಪಿಗಳು ತಾವು ರೂಪಿಸಿದ ಅಗ್ಗದ ಸಾಮೂಹಿಕ ವಸತಿ ಯೋಜನೆಗಳಿಗೆ ಸರ್ಕಾರದ ಪ್ರೋತ್ಸಾಹ ದೊರೆಯದೆ, ಶ್ರೀಮಂತರ ಸೌಧಗಳನ್ನೆ ಆಶ್ರಯಿಸುತ್ತಿದ್ದಾರೆ ಎಂದು ವಾಸ್ತು ಶಿಲ್ಪಿ ಯೊಬ್ಬರು ಹಳಹಳಿಸಿದರೆ ಆಶ್ಚರ್ಯವೇನು ? ●

ನೀವು ಎಂದಾದರೂ ಮೈಸೂರು ನೋಡಲು ಹೋಗಿದ್ದರೆ ಅಲ್ಲಿರುವ ಹತ್ತಾರು ಅರಮನೆಗಳನ್ನು ನೋಡಿ ಒಂದೊಂದು ಅರಮನೆಯ ವಿಸ್ತಾರವನ್ನು ವೈಭವವನ್ನೂ ನೋಡಿ ಬೆರಗಾಗುತ್ತೀರಿ. ಬೆಂಗಳೂರಿನಲ್ಲಿ ರಾಜಮಹಲಮೀಸವೆಂಬುದೊಂದಿದೆ ಆಧುನಿಕ ರಾಜರುಗಳು ಇಲ್ಲಿನ ಅರಮನೆಗಳಲ್ಲಿ ಪ್ರೇತಗಳಂತೆ ಬದುಕುತ್ತಾರೆ. ನಿಮ್ಮ ಊರಿನಲ್ಲಿಯೂ ತೆಂತಹ ಜನ ಇದ್ದೇ ಇರುತ್ತಾರೆ ಇದು ಒಂದು ಚಿತ್ರ. ಇನ್ನು ಆಕಾಶವೇ ಚಾವಣಿಯಾಗಿರುವ ಅಸಂಖ್ಯ ಜನದ ಬಗ್ಗೆ ಗುಡಿಸಲುಗಳಲ್ಲಿ ಕಿಕ್ಕಿರಿದು ತುಂಬಿರುವ ಜನರ ಬಗ್ಗೆ ನಿಮಗೆ ವರ್ಣಿಸಬೇಕಾಗಿಲ್ಲ.

ಈ ವಸತಿ ಕೊರತೆ ಸದ್ಯದ ಕಾಲಾವಧಿಯಲ್ಲಿ ಮಾತ್ರ ಕಂಡು ಬಂದಿರುವ ವಿಶಿಷ್ಟ ಸಮಸ್ಯೆಯೇನಲ್ಲ, ಒಂದು ಕೇವಲ ಈಗಿನ ಕಾರ್ಮಿಕ ವರ್ಗ, ಮಾತ್ರ ಎದುರಿಸಬೇಕಾದ ಸಮಸ್ಯೆಯೇನಲ್ಲ. ಎಲ್ಲಾ ಯುಗಗಳಲ್ಲಿ ಎಲ್ಲಾ ಶೋಷಿತ-ದಲಿತ ವರ್ಗಗಳು ಸಮರೂಪದಲ್ಲಿ ಈ ಸಂಕಟವನ್ನು ಅನುಭವಿಸುತ್ತಾ ಬಂದಿವೆ. ಈ ವಸತಿ ಕೊರತೆಯನ್ನು ಕೊನೆಗೊಳಿಸಲು ಇರುವ ದಾರಿಯೊಂದೇ ಆಳುವವರ್ಗದಿಂದ ಶೋಷಣೆಯನ್ನ, ದಮನವನ್ನು ನಿರ್ನಾಮ ಮಾಡುವುದು. ಈಗೇನು ಮನೆಯ ಅಭಾವವೆಂದು ಹೇಳಲಾಗುತ್ತಿದೆಯೋ ಅದು ದೊಡ್ಡ ನಗರಗಳತ್ತ ಇದ್ದಕ್ಕಿದ್ದಂತೆ ಜನ ಸಾಗಲಾರಂಭಿಸಿದ ಪರಿಣಾಮವಾಗಿ ಕಾರ್ಮಿಕರ ವಸತಿ ಸಂಕಟಗಳು ಇನ್ನಷ್ಟು ಹದಗೆಟ್ಟಿರುವುದು ಬಾಡಿಗೆಯ ವಿಪರೀತಹೆಚ್ಚಳ, ಅದಕ್ಕಿಂತ ಹೆಚ್ಚಾಗಿ ಕಿಕ್ಕಿರಿದ ಮನೆಗಳು, ಕೆಲವರಿಗೆ ಮಲಗಲು ಜಾಗವೇ ಸಿಗದ ಪರಿಸ್ಥಿತಿ. ಈ ವಸತಿ ಕೊರತೆಯ ಬಗ್ಗೆ ಈಗ ಬಹಳ ಮಾತು ಕೇಳಬರಲು ಕಾರಣ ಈ ಸಮಸ್ಯೆ ಈಗ ಕಾರ್ಮಿಕರಿಗೆ ಮಾತ್ರ ಸೀಮಿತವಾಗಿಲ್ಲ, ಪೆಟ್ಟಿ ಬೂರ್ಜ್ವಾವರ್ಗವನ್ನು ತಟ್ಟಿದೆ.

ಫ್ರೆಡರಿಕ್ ಎಂಗೆಲ್ಸ್ (1872 ರಲ್ಲಿ)

ಕೊಳೆಗೇರಿಗಳು - ವಸತಿ ಸಮಸ್ಯೆಯ ವಿಕಟ ಸ್ವರೂಪ

ಶತಮಾನದ ಅಂತ್ಯದ ವೇಳೆಗೆಈ ಭಾರತದ ಅರ್ಧದಷ್ಟು ಜನ ಪಟ್ಟಣಗಳಲ್ಲಿ ವಾಸಿಸುತ್ತಿದ್ದರೆ, ಇವರಲ್ಲಿ ಅರ್ಧದಷ್ಟು ಜನ ನಗರದ ಕೊಳೆಗೇರಿಗಳಲ್ಲಿ ವಾಸಿಸಬೇಕಾಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಕೊಳೆಗೇರಿಗಳೆಂದರೇನು ? ಅನಾರೋಗ್ಯಕರವಾದ, ಕಿಕ್ಕಿರಿದ, ಯಾವ ಸೌಲಭ್ಯವೂ ಇಲ್ಲದ ಕಚ್ಚಾ ಮನೆಗಳ ಅಥವಾ ಗುಡಿಸಲುಗಳ-ಒಟ್ಟನಲ್ಲಿ ಮಾನವ ಯೋಗ್ಯವಲ್ಲದ ವಸತಿ ಪ್ರದೇಶ. ವಿಪರೀತ ಮನೆ ಬಾಡಿಗೆಗೆ, ಸಾರಿಗೆಗೆ ಖರ್ಚು ಮಾಡುವಷ್ಟು ಆದಾಯವಿಲ್ಲದ ಜನರ ಬಗ್ಗೆ ತಮ್ಮ ವಸತಿ ಸಮಸ್ಯೆಯನ್ನು ತಾವೇ ಪರಿಹರಿಸಿಕೊಳ್ಳಲು ಕಂಡುಕೊಂಡ ದಾರಿಯಿದು ; ಈಗ ಇದು ಲಾಭ ದೋಚುವ ಜನರಿಗೆ ಇನ್ನೊಂದು ಸಮೃದ್ಧ ಸಾಧನ ಮತ್ತು ಕೆಲವೊಮ್ಮೆ ಬೂರ್ಜ್ವಾ ರಾಜಕೀಯ ಪಕ್ಷಗಳ ಪುಢಾರಿ ರಾಜಕೀಯದ "ಮತಬ್ಯಾಂಕ್"ಗಳು ಕೂಡಾ ಎಂಬುದು ಬೇರೆಮಾತು.

ಕೊಳೆಗೇರಿಗಳ ಸಮಸ್ಯೆಯನ್ನು ಎರಡು ದೃಷ್ಟಿಯಿಂದ ನೋಡಬಹುದು. ಒಂದು, ಕೊಳೆಗೇರಿ ನಿವಾಸಿಗಳ ದೃಷ್ಟಿಯಿಂದ, ಇನ್ನೊಂದು ಅದರ ಸುತ್ತಮುತ್ತಲಿನ ಮಾನವಯೋಗ್ಯ ವಸತಿ ಪ್ರದೇಶ ನಿವಾಸಿಗಳ ದೃಷ್ಟಿಯಿಂದ.

ಸಾಮಾನ್ಯವಾಗಿ ಈ ಎರಡನೇ ದೃಷ್ಟಿಯಿಂದಲೇ ಸಮಸ್ಯೆಯನ್ನು ನೋಡಲು ಹಾಗೂ ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ. ಅಂದರೆ ಕೊಳೆಗೇರಿಗಳಲ್ಲಿ ಇರುವವರ ಪರಿಸ್ಥಿತಿಯಿಂದ ಅದರ ಸುತ್ತಮುತ್ತಲಿರುವ ಉಚ್ಚ ವರ್ಗಗಳ ಜನರಿಗೆ ತೊಂದರೆಯಾದಾಗ ಮಾತ್ರ ಇದನ್ನು ಸಮಸ್ಯೆಯೆಂದು ಪರಿಗಣಿಸಿ ಪರಿಹಾರಕ್ಕೆ ಮುತೀಸುವ ದೃಷ್ಟಾಂತಗಳೇ ಹೆಚ್ಚು. ಆಗ ಇದನ್ನು ಹೇಗೆ ಪರಿಹರಿಸಲಾಗುತ್ತದೆ ? ಹಿಂದು ಕೊಳಚೆ ಪ್ರದೇಶಗಳ ನಿರ್ಮೂಲನ ತುರ್ತುಪರಿಸ್ಥಿತಿಯ ತುರ್ಕಮಾನ್

[6ನೇ ಪುಟನೋಡಿ]

ತಾರಾ ಸಮರ ಒಂದು ಮೂರ್ಖ ಯೋಜನೆ

– ಅಮೇರಿಕದ ವಿಜ್ಞಾನಿ

ಪಿ. ಡಬ್ಲ್ಯು. ಎಂಡರ್‌ಸನ್ ಎಂಬ ನೋಬೆಲ್ ಪಾರಿತೋಷಕ ಪಡೆದ ಅಮೇರಿಕಾದ ಭೌತ ಶಾಸ್ತ್ರದ ವಿಜ್ಞಾನಿ ತಾರಾ ಸಮರ ಒಂದು ಮೂರ್ಖ ಯೋಜನೆಯಾಗಿದೆ, ಮಾತ್ರವಲ್ಲದೇ ಮೂರ್ಖವಾಗಿದ್ದರೂ ಅತೀ ಅಪಾಯಕಾರೀ ಹಾಗೂ ಭಯಂಕರವಾಗಿದೆ ಎಂದರು. ಈ ಮೂರ್ಖ ಯೋಜನೆಯ ಯೋಜಕರಾದ ರೇಗನ್ನರ ದೇಶದಲ್ಲೇ ಇದರ ವಿರುದ್ಧ ಜನಾಭಿಪ್ರಾಯ ಬೆಳೆಯುತ್ತಿರುವುದನ್ನು ಪ್ರಸ್ತಾಪಿಸಿದ ವಿಜ್ಞಾನಿ, ಸುಮಾರು ಶೇ 45 ರಷ್ಟು ವಿಜ್ಞಾನಿಗಳು ಇದನ್ನು ಖಂಡಿಸಿದ್ದು ಮಾತ್ರ ಅಲ್ಲದೇ, ತಾರಾ ಸಮರದ ಸಂಶೋಧನಾ ಕಾರ್ಯದಲ್ಲಿ ಭಾಗವಹಿಸಲಾರೆವು ಎಂದು ಪ್ರತಿಜ್ಞೆ ಮಾಡಿದ್ದಾರೆ, ಈ ರೀತಿ ಪ್ರತಿಜ್ಞೆ ತೆಗೆದುಕೊಂಡ ವಿಜ್ಞಾನಿಗಳು ಕೆಲಸ ಕಳೆದುಕೊಂಡು ಅವರ ಬಾಳೇ ಬರಡಾಗುವ ಸಾಧ್ಯತೆ ಇರುವುದರಿಂದ ಇದೊಂದು ಧೈರ್ಯದ, ಸಾಹಸಮಯ ಕಾರ್ಯ ಎಂದು ವರ್ಣಿಸಿದರು. ತಾರಾ ಸಮರಕ್ಕೆ ದುಡಿಯಲು ಒಪ್ಪಿದ ಉಳಿದ ವಿಜ್ಞಾನಿಗಳ ಮೇಲೆ ಈ ಕೆಲಸವನ್ನು ಬಲತ್ಕಾರವಾಗಿ ಹೇರಲಾಗಿದೆ, ಇಂತಹ ವಿಜ್ಞಾನಿಗಳು ಹೆಚ್ಚಿನವರು ಹೊರದೇಶದವರಾಗಿದ್ದು, ಅವರು ಈ ಹೇಯ ಕೃತ್ಯಕ್ಕೆ ತೊಡಗದಿದ್ದಲ್ಲಿ ಅವರನ್ನು ಕೆಲಸದಿಂದ ಹಾಗೂ ಅಮೇರಿಕಾ ದೇಶದಿಂದ ಹೊರಗಟ್ಟುವ ಬೆದರಿಕೆ ಹಾಕಲಾಗಿದೆ ಎಂದು ಇತ್ತೀಚೆಗೆ ಬೆಂಗಳೂರಿನಲ್ಲಿ ಮಾತಾನಾಡುತ್ತಾ ತಿಳಿಸಿದರು. ಸುಪ್ರಸಿದ್ಧ ತಾರಾ ವಿಜ್ಞಾನ ಮಂದಿರದಲ್ಲಿ 800 ಕ್ಕೂ ಹೆಚ್ಚು ವಿಜ್ಞಾನಿಗಳನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು ಎಂಡರ್‌ಸನ್

'ತಾರಾ ಸಮರ ಕೇವಲ ಪ್ರಯೋಗಾತ್ಮಕ, ಇದು ಕಾರ್ಯಾಚರಣೆಗೆ ಬರಲಾರದು, ಇದರಿಂದ ಅಪಾಯ ಏನೂ ಇಲ್ಲ. ಇದರ ಬಗ್ಗೆ ವಿಜ್ಞಾನಿಗಳು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ, ಎಂದು ಅಮೇರಿಕಾದ ಆಡಳಿತೆ ವಿಷ ಕಾರುತ್ತಿರುವುದನ್ನು ಲೇವಡಿ ಮಾಡಿದ ಎಂಡರ್‌ಸನ್ ಅವರು, ಈ ಯೋಜನೆ ತಾಂತ್ರಿಕವಾಗಿ ಫಲಕಾರೀ ಆಗುವುದಿಲ್ಲ ಎಂದರು. ಈ ವಿಫಲ ಪ್ರಯತ್ನವೇ ಅಪಾಯಕಾರೀ, ಏಕೆಂದರೆ ಪ್ರಯೋಗದ ಕಾಲದಲ್ಲೇ ಇದು ಮೂರನೇ ಅಣುಯುದ್ಧಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಎಚ್ಚರಿಸಿದರು. ತಾರಾ ಸಮರದ ಟೊಳ್ಳುತನವನ್ನು ಬಯಲು ಮಾಡುತ್ತ ಇವರು ತಾರಾ ಸಮರದ ಪ್ರಯೋಗಕ್ಕೆ (ಕಾರ್ಯಾಚರಣೆಯ ಮೊದಲು) ಬಾಹ್ಯಾಕಾಶದಲ್ಲಿ ಯುದ್ಧ ಯಂತ್ರಗಳನ್ನು ಸ್ಥಾಪಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಸೋವಿಯತ್ ರಶ್ಯಾ ಮೂಕವಾಗಿ ಕುಳಿತಿರಲು ಸಾಧ್ಯವೇ ಎಂದು ಪ್ರಶ್ನಿಸಿದರು. ಮುಂದುವರಿದ ಇವರು, ತಾರಾ ಸಮರಕ್ಕಾಗಿ ಬಾಹ್ಯಾಕಾಶದಲ್ಲಿ ಇರಿಸುವ ಯಂತ್ರೋಪಕರಣಗಳ ರಕ್ಷಣೆ ಅಮೇರಿಕಾ ದೇಶಕ್ಕೆ ದೊಡ್ಡ ಸಮಸ್ಯೆ ಆಗುತ್ತಿದೆ, ಇದಕ್ಕಾಗಿ ಬಾಹ್ಯಾಕಾಶದಲ್ಲಿ ಒಂದಲ್ಲ, ಮೂರು ಸ್ಥಳಗಳಲ್ಲಿ ಅಣು ಯುದ್ಧೋಪಕರಣಗಳನ್ನು ಸ್ಥಾಪಿಸಬೇಕಾಗುತ್ತದೆ, ಇದರಲ್ಲಿ ಒಂದು ಸ್ಥರದ ಯೋಜನೆಗೆ ಇಡೀ ಅಮೇರಿಕಾದ ರಾಷ್ಟ್ರೀಯ ಉತ್ಪತ್ತಿ ಬೇಕಾಗುತ್ತದೆ. ಏದಾಗ್ಯೂ ಇದು ವೈರಿಗಳಿಂದ ಬರುವ ಕೇವಲ ಶೇ 20 ಕ್ಷಿಪಣಿಗಳನ್ನು ಹೊಡೆದುರುಳಿಸಬಹುದು. ಇದಕ್ಕೆ ಪ್ರತಿಯಾಗಿ ಸೋವಿಯತ್‌ದೇಶ ತಾರಾಸಮರಕ್ಕಿಳಿದರೆ, ಸೋವಿಯತ್ ದೇಶ ಕೂಡ ದಿವಾಳಿ ಆಗುವ ಸಂಧರ್ಬ ಬಂದು ಇಡೀ ಜಗತ್ತಿನ ಆರ್ಥಿಕ ಪರಿಸ್ಥಿತಿಯೇ ಬಿಗಡಾಯಿಸುತ್ತದೆ ಎಂದು ಎಚ್ಚರಿಕೆ ನೀಡಿದರು.

ತಾರಾ ಸಮರದಿಂದ ಸಾಮಾಜಿಕ ಪರಿಸ್ಥಿತಿ ಯಾವ ರೀತಿ ಬಿಗಡಾಯಿಸುತ್ತದೆ ಎಂದು ವಿವರಿಸಿದ ಎಂಡರ್‌ಸನ್ 'ಅವರು ತಾರಾ ಸಮರಕ್ಕೆ ಅಪಾರ ಕೋಟಿ ರೂ. ಹಣ ವ್ಯಯವಾಗುತ್ತದೆ. (1ರ ಮುಂದೆ 13 ಸೊನ್ನೆ ಸೇರಿಸಿದಷ್ಟು !), ಇದರಿಂದ ವಿದ್ಯಾಭ್ಯಾಸ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ ಕುಂಠಿತವಾಗುತ್ತಿವೆ, ಈವಾಗಲೇ ಇದರ ಪರಿಣಾಮವನ್ನು ನಾವು ಅಮೇರಿಕದಲ್ಲಿ ನೋಡುತ್ತಿದ್ದೇವೆ. ಇದರಿಂದಾಗಿ ಅತ್ಯಂತ ಉತ್ತಮ ಮಟ್ಟದ ಸಂಪನ್ಮೂಲಗಳು ಜನಕ್ಕೆ ಅವಶ್ಯಕವಾದ ಅಗತ್ಯಗಳಿಗೆ ಬದಲಾಗಿ ಈ ವ್ಯರ್ಥ ಯೋಜನೆಗೆ ವೆಚ್ಚವಾಗುತ್ತದೆ ಇದರಿಂದ ಜನಜೀವನ ಕುಸಿಯುತ್ತದೆ ಈ ಪರಿಸ್ಥಿತಿ ವೈಜ್ಞಾನಿಕ ಸಂಶೋಧನೆಯನ್ನೂ ಬಿಟ್ಟಿಲ್ಲ, ಉದಾಹರಣೆಗೆ ಭೌತಶಾಸ್ತ್ರದಲ್ಲಿ ಬರುವ ಸತ್ವಪೂರ್ಣ ಬರಹಗಳು ಅಮೇರಿಕಾವನ್ನು ಬಿಟ್ಟು ಬೇರೆ ದೇಶಗಳಿಂದ ಬರುತ್ತಿವೆ, ಇಷ್ಟಲ್ಲದೇ ಕೈಗಾರಿಕೆ ಹಾಗೂ ತಾಂತ್ರಿಕತೆಯಲ್ಲಿ ಅಮೇರಿಕಾ ಹಿಂದೆ ಬಿದ್ದು, ಆರ್ಥಿಕ ಅಧಃಪತನದತ್ತ ಸಾಗುತ್ತಿದೆ' ಎಂದುಸವಿವರವಾಗಿ ಹೇಳಿದರು ನನ್ನ ದೇಶದ ಜನತೆಯ ಹಿತಕ್ಕಾಗಿ ಈ ತಾರಾ ಸಮರದ ಖಂಡನೆಯನ್ನು ಮಾಡಿದ್ದೇನೆ ಎಂದ ಎಂಡರ್‌ಸನ್ ಅವರು, ದೇಶಪ್ರೇಮ ಎಂದರೆ ತನ್ನ ದೇಶವನ್ನು ಪ್ರೀತಿಸುವುದಾಗಿರುತ್ತದೆವಿನಹ, ಬೇರೆದೇಶಗಳನ್ನುದ್ವೇಷಿಸುವುದಲ್ಲ ಎಂದು ಅವರು ನಗುತ್ತ ಹೇಳಿದರು. ರೇಗನ್ನರ ತಾತ್ವಿಕ ನಿಲುವನ್ನು ಪ್ರಶ್ನಿಸಿದ ಎಂಡರ್‌ಸನ್ ಅವರು, ರೇಗನ್ನರ ತಾರಾ ಸಮರದಿಂದ ಜಗತ್ತಿನಲ್ಲಿ ಅಣುಯುದ್ಧ ಒಂದು ಲೆಕ್ಕಕ್ಕೆ ಬಾರದಂತಾಗುತ್ತದೆ ಎನ್ನುತ್ತಾರೆ, ಆದರೆ ತಾರಾ ಸಮರಕ್ಕೆ ಹೊರಟದ್ದೇ ಆದರೆ ಅಣು ಸಮರವಲ್ಲ, ಅಮೇರಿಕಾ ದೇಶವೇ ಲೆಕ್ಕಕ್ಕೆ ಬಾರದಂತಾಗುತ್ತದೆ. ಎಂದು ತಮ್ಮ ಭಾಷಣವನ್ನು ಮುಗಿಸಿದರು.

ಚುನಾವಣೆಯ ಅನುಭಗಳು

[2ನೇ ಪುಟದಿಂದ]

ಮಾಮೂಲಿಯಾಗಿ ಎದ್ದು ಕಾಣುತ್ತಿದ್ದವು. ತಾಂಡಾಗಳಲ್ಲಿ 75% ಜನ ಕೂಲಿಕಾರರು ಹೊಟ್ಟೆಪಾಡಿಗಾಗಿ ಕಾಫೀ ಸೀಮೆಗೆ ಗುಳೇ ಹೋಗಿದ್ದರು. ಮನೆ, ದನಕರುಗಳನ್ನು ನೋಡಿಕೊಳ್ಳಲು ಸ್ವಲ್ಪ ಜನ ಮಾತ್ರ ಇದ್ದರು. ಲಂಬಾಣಿ ಜನರಿಗೆ ಭೂಮಿಯ ಹಸಿವು ಮುಖ್ಯವಾಗಿದ್ದು ಭೂಮಿಗಾಗಿ ಹೋರಾಟ ಮಾಡಲು ಸಿದ್ಧರಿದ್ದೇವೆ. ರೈತ ಸಂಘವನ್ನು ಕಟ್ಟುತ್ತೇವೆ ಎಂದು ಹೇಳುತ್ತಿದ್ದರು. ಇದೇ ರೀತಿ ಎಲ್ಲಾ ಕಡೆ ನಮ್ಮ ಜಾಥಾದ ಬಗ್ಗೆ ಉತ್ತಮ ಪ್ರತಿಕ್ರಿಯೆ ಮಾಡಿ ಬಂದಿದ್ದು ಸಂಘಟನೆಯ ಅವಶ್ಯಕತೆಯನ್ನು ರೈತರು ಮನಗಾಣುತ್ತಿದ್ದರು. ಭಾಷಣ ಮಾಡಿದಲ್ಲೆಲ್ಲಾ ಕಾಂಗ್ರೈ, ಜನತಾ ಪಕ್ಷಗಳ ಬಗ್ಗೆ ಸಹ ಟೀಕೆಯ ಮಾತನಾಡುತ್ತಾ, ರೈತರ ಒಗ್ಗಟ್ಟಿನ ಮಹತ್ವದ ಬಗ್ಗೆ ಜನರು ಮಾತನಾಡುತ್ತಿದ್ದರು. ನಮ್ಮನ್ನು ಹೊಸ ಭರವಸೆಗಳ ಆಶೆಯ ಗಣ್ಣಿನಿಂದ ವೀಕ್ಷಿಸುತ್ತಿದ್ದರು.

ಪೋಲೀಸರ ದೌರ್ಜನ್ಯ :

ಹರಪನಹಳ್ಳಿಯ ಪಕ್ಕದ ಯಲ್ಲಾಪುರ, ಕೊರಚರ ಹಳ್ಳಿಯಲ್ಲಿ ಜನ ದುಡಿಯಲು ಭೂಮಿಯಿಲ್ಲದೆ. ಜೀವನ ನಿರ್ವಹಿಸಲು ಬೇರೆ ದಾರಿಯಿಲ್ಲದೆ ಕೂಲಿ, ಸರಾಯಿ ಮಾರುವುದಷ್ಟೇ ಕಸುಬನ್ನಾಗಿ ಮಾಡಿಕೊಂಡಿದ್ದು ಪೋಲೀಸರು ಈ ಊರಿಗೆ ತಿಳಿದಾಗ ದಾಳಿ ಮಾಡಿ ಜನರನ್ನು ಕೈ ಕಾಲು ಮುರಿಯುವಂತೆ ಥಳಿಸಿ, ಅವರಲ್ಲಿದ ಹಣ ಇತ್ಯಾದಿ ವಸ್ತುಗಳನ್ನು ಕಸಿದುಕೊಂಡು ಹೋಗುತ್ತಿದ್ದಾರೆ. ಈ ಊರಿನ ಜನರಿಗೆ ಎಲ್ಲಾ ಸಮಸ್ಯೆಗಳಿಗಿಂತ ಪೋಲೀಸರೇ ಭೂತಾಕಾರದ ಸಮಸ್ಯೆಯಾಗಿ ಕಾಣುತ್ತಿದ್ದಾರೆ. ನಾವು ಹಾಡುಹೇಳಿ ಭಾಷಣ ಮಾಡಿದಾಗ ಮೊದಲು ನಮ್ಮನ್ನು ವಿರೋಧಿಸಿದ ಇವರು ನಂತರ ಊಟ ಮಾಡಲು ಒತ್ತಾಯಿಸಿ ಬೇಡವೆನ್ನಲು ಟೀ ಕೊಟ್ಟು, ಸೈಕಲ್ ಬಾಡಿಗೆಗೆ ಹಣವನ್ನು ಸಂಗ್ರಹಿಸಿ ಕೊಟ್ಟರು. ಪೋಲೀಸರ ದೌರ್ಜನ್ಯವನ್ನು ಎದುರಿಸಲು ಸಂಘ ಕಟ್ಟುತ್ತೇವೆ ಎಂದು ತಿಳಿಸಿದರು. ನಮ್ಮ ಪಕ್ಷದ ರಾಜ್ಯ ಮುಖಂಡರಾದ ಕಾಂ. ಎನ್. ಕೆ. ಉಪಾಧ್ಯಾಯರವರು ಆಗಮಿಸಿದ್ದು ಹಲುವಾಗಲಿನಲ್ಲಿ ಭಾಷಣ ಮಾಡುತ್ತಿರುವ ಸಮಯದಲ್ಲಿ ಕಾಂಗ್ರೈನ ಪುಡಾರಿಗಳು ಕೇಕೆ ಹಾಕುತ್ತಾ ಗಲಾಟೆ ಮಾಡತೊಡಗಿದರು. ಪೋಲೀಸ್ ಸ್ಟೇಷನ್ ಪಕ್ಕದಲ್ಲೇ ಇದ್ದರೂ ಪೋಲೀಸರು ಗಮನವೀಯದಿದ್ದಾಗ ಅವರ ಅಲಕ್ಷ್ಯತನವನ್ನು ಟೀಕಿಸಲಾಗಿ ಮೈಕ್ ಕಿತ್ತುಕೊಳ್ಳಲು ಪ್ರಯತ್ನಿಸಿದ್ದಲ್ಲದೆ ಕಾಂ. ಎಂ. ಸಿದ್ದಪ್ಪನವರನ್ನು ಒದ್ದು ಲಾಕಪ್‌ನಲ್ಲಿ ಹಾಕುತ್ತೇವೆ ಎಂದು ಬೆದರಿಕೆ ಹಾಕಿದರು. ನಾಗರೀಕರು ಪ್ರತಿಭಟಿಸಿ ಪೋಲೀಸರ ಬಾಲವನ್ನು ಮುದುರಿಕೊಳ್ಳುವಂತೆ ಮಾಡಿದರು.

ಮತಗಳ ಹರಾಜು :

29-12-1986ನೇ ತಾರೀಖಿಗೆ ಸೈಕಲ್ ಜಾಥಾ ಮಾಡಿ ಪುನಃ ಹಳ್ಳಿಗಳನ್ನು ವೀಕ್ಷಿಸಲು ಹೋದಾಗ ನಮ್ಮ ಭರವಸೆಗಳು ಸುಳ್ಳಾಗಿದ್ದವು. ಜಾಥಾ ಸಂದರ್ಭದಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ಮೂಡಿ ಬಂದಿದ್ದು, ನಾವು ಭಾಷಣದಲ್ಲಿ ಹೇಳಿದ್ದ ಆದರ್ಶ, ನೀತಿಗಳು ಕಾಂಗ್ರೈ, ಜನತಾದವರು ಹರಿಸಿದ ಸರಾಯಿ, ಹೆಂಡ, ಹಣದ ಹೊಳೆಯಲ್ಲಿ ಕೊಚ್ಚಿ ಹೋಗಿದ್ದವು. ಕೇವಲ ಎರಡು ದಿನದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಜನತಾ, ಕಾಂಗ್ರೈ ಅಭ್ಯರ್ಥಿಗಳು ನೀರಿನಂತೆ ಹರಿಸಿ ಸಂಪೂರ್ಣ ವಾತಾವರಣವನ್ನು ಭ್ರಷ್ಟಗೊಳಿಸಿದರು. ತಮ್ಮ ಕಾರುಗಳಲ್ಲಿ ಬ್ರಾಂಡಿ, ಸರಾಯಿ ತಂದು ಜನರಿಗೆ ಹಂಚಿ, ಅಮಲೇರಿಸಿ ಗೆದ್ದು ಬಂದರು. ಹುಲಿಕಟ್ಟೆ, ಮಾಡ್ಲಿಗೇರಿ, ಮತ್ತಿಹಳ್ಳಿಗಳಲ್ಲಿ ಮಾತ್ರ ಇವರ ಆಟ ನಡೆಯದಂತೆ ನಮ್ಮ ಕಾರ್ಯಕರ್ತರು ಎಚ್ಚರ ವಹಿಸಿ ಕೆಲಸ ಮಾಡಿದರು. ಈ ಹಳ್ಳಿಗಳಲ್ಲಿ ಜಗಳ ಮಾಡಲು ಪ್ರಯತ್ನಿಸಿ ವಿಫಲರಾದರು. ●

ವರದಿ: ಹುಲಿಕಟ್ಟೆ ಚನ್ನಬಸಪ್ಪ

ಏಜಂಟರ ಗಮನಕ್ಕೆ

ಕೇಂದ್ರ ಸರಕಾರ ಒಂದು ಕಡೆ ಈ ವರ್ಷ ಜನವರಿ 1 ರಿಂದ ಪೋಸ್ಟಲ್ ಚಾರ್ಜ್ ಹೆಚ್ಚಿಸಿದೆ. ಮತ್ತೊಂದು ಕಡೆ ಜನರಿಗೆ ಒದಗಿಸುವ ಸೇವೆ ನಿಲ್ಲಿಸಿದೆ. ಇನ್ನು ಮುಂದೆ ಪೋಸ್ಟ ಮನ್ ನಿಮಗೆ ಐಕ್ಯರಂಗ ಪಾರ್ಸಲ್ ಬಟವಾಡೆ ಮಾಡದಿದ್ದರೆ ನಮ್ಮ ಏಜಂಟರೆಲ್ಲ ಪೋಸ್ಟ ಆಫೀಸಿಗೆ ಹೋಗಿ ಐಕ್ಯರಂಗದ ಪಾರ್ಸೆಲನ್ನು ತೆಗೆದುಕೊಳ್ಳಬೇಕು. ಐಕ್ಯರಂಗ ಏಜಂಟರು ಇದನ್ನು ಗಮನಿಸಬೇಕಾಗಿ ವಿನಂತಿ.

ಸಂಪಾದಕ ಮಂಡಳಿ

ವಸತಿ ಸಮಸ್ಯೆಯ ವಿಕಟ ಸ್ವರೂಪ

[4ನೇ ಪುಟದಿಂದ]

ಗೇಟ್, ಇತ್ತೀಚೆಗೆ ಮುಂಬೈಯ ಧಾರಾವಿಯಲ್ಲಿ ಹಾಗೂ ಬೆಂಗಳೂರಿನ ಹಲವೆಡೆ ನಿರ್ಮೂಲ ಪ್ರಯತ್ನ ನಡೆದದ್ದು ನಾವು ಯಾರೂ ಮರೆಯಲು ಸಾಧ್ಯವಿಲ್ಲ. ನಗರದ ಮಧ್ಯದಲ್ಲಿ ಜಮೀನಿನ ಬೆಲೆ ಚಿನ್ನದ ಗಣಿಯಂತಾಗಿರುವಲ್ಲಿ ಬಹಳ ಕಾಲದಿಂದ ನೆಲೆಸಿರುವ ಬಡ ಜನರಿಂದ ಅವನ್ನು "ಮುಕ್ತಗೊಳಿಸಿ" ನಗರದ ಹೊರವಲಯಕ್ಕಟ್ಟಿ ನಗರವನ್ನು "ಸುಂದರ ಗೊಳಿಸಲು" ಇದು "ಏಕೈಕ" ಮಾರ್ಗ. ಇನ್ನೊಂದು ಪರಿಹಾರ–ಕೊಳಚೆ ಪ್ರದೇಶಗಳ ಅಭಿವೃದ್ಧಿ-ನೀರು, ದೀಪ, ಚರಂಡಿ ಮುಂತಾದ ಅಗತ್ಯಗಳನ್ನೂ ಕನಿಷ್ಟ ಪ್ರಮಾಣದಲ್ಲಾದರೂ ಒದಗಿಸುವುದು.

ಆದರೆ ಇದು ಕೂಡಾ ಶಾಶ್ವತ ಪರಿಹಾರವಲ್ಲ ಎಂಬುದೂ ಈಗ ತಿಳಿದು ಬರುತ್ತಿದೆ.

ಇನ್ನೊಂದು ವಿಷಯ "ಸುಂದರ ನಗರ" ಬಯಸುವವರು ಕೂಡಾ ಈ ಅಸುಂದರ ಕೊಳೆಗೇರಿಗಳನ್ನು ಪೂರ್ತಿಯಾಗಿ ಇಲ್ಲದಂತೆ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಆಗ ಅವರ "ಸುಂದರ ನಗರ" ಕೂಡಾ ಇರಲಾರದು. ಕಾರಣ ವಿಷ್ಟ. ಚರಂಡಿ ವ್ಯವಸ್ಥೆ, ಸಾರಿಗೆ, ಸಂಬಂಧಪಟ್ಟ ಚಟುವಟಿಕೆಗಳು, ಕಟ್ಟಡ ನಿರ್ಮಾಣ ಚಟುವಟಿಕೆಗಳು, ಮನೆಗೆಲಸ ಮುಂತಾದ ಅನಿವಾರ್ಯ ಸೇವೆಗಳನ್ನು ಒದಗಿಸುವ ಜನ ಇಲ್ಲೇ ವಾಸಿಸಲು ಸಾಧ್ಯ ?

ಬೆಂಗಳೂರಿನಲ್ಲಿ ಈಗ ಕೊಳೆಗೇರಿ ನಿವಾಸಿಗಳ ಸಂಖ್ಯೆ 2.29 ಲಕ್ಷ, ಇದು ಒಟ್ಟು ನಗರವಾಸಿಗಳ 11% ದಷ್ಟಾಗುತ್ತದೆ. ಮುಂಬೈ ಹಾಗೂ ಕಲ್ಕತ್ತಗಳಲ್ಲಿ ಈ ಸಂಖ್ಯೆ 35 ಶೇಕಡಾ, ರಾಜಧಾನಿ ದೆಹಲಿಯಲ್ಲಿ 28 ಶೇಕಡಾ. ●

ರಾಮಾನುಜಂ ಹೇಳಿಕೆಯ ಖಂಡನೆ

ರಾಜೀವಗಾಂಧಿಯವರ ಸಾರ್ವಜನಿಕ ಕ್ಷೇತ್ರವನ್ನು ಖಾಸಗೀಕರಣ ಗೊಳಿಸುವ ನೀತಿಯ ವಿರುದ್ಧ ಜನವರಿ 21 ರಂದು ಸಾರ್ವಜನಿಕ ಕೈಗಾರಿಕೆಗಳ ಕಾರ್ಮಿಕರೂ ಮುಷ್ಕರ ಹೂಡುವ ನಿರ್ಣಯವನ್ನು ಐ.ಎನ್.ಟಿಯು.ಸಿ. ಯ ಅಧ್ಯಕ್ಷರಾದ ರಾಮಾನುಜಂ ಅವರು ವಿರೋಧಿಸಿರುವುದನ್ನು ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷರಾದ ಎಸ್. ಸೂರ್ಯ ನಾರಾಯಣರಾವ್ ಅವರು ಬಲವಾಗಿ ಖಂಡಿಸಿ, ಮುಷ್ಕರವನ್ನು ಯಶಸ್ವಿಗೊಳಿಸಿ ಕೇಂದ್ರ ಸರಕಾರದ ನೀತಿಯ ವಿರುದ್ಧ ತಮ್ಮ ಪ್ರತಿಭಟನೆ ವ್ಯಕ್ತಮಾಡಬೇಕೆಂದು ಕರೆ ನೀಡಿದ್ದಾರೆ.

ಪುಸ್ತಕ ವಿಮರ್ಶೆ :

ಹಿಂದೂ - ಮುಸ್ಲಿಂ ಘರ್ಷಣೆಗಳ ಸಮಸ್ಯೆ

ಪರಿಹಾರ ಸಮರ್ಪಕವಾಗಿ ರೂಪಿಸಲ್ಪಟ್ಟಿಲ್ಲ

ಸ್ವಾತಂತ್ರ್ಯದ ಕೆಲವು ವರ್ಷಗಳ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ಪಡೆದ ನಂತರ ನಮ್ಮ ದೇಶ ಎದುರಿಸುತ್ತಿರುವ ಕೆಲವು ಮುಖ್ಯ ಸಮಸ್ಯೆಗಳಲ್ಲಿ ಹಿಂದೂ – ಮುಸ್ಲಿಂ ಘರ್ಷಣೆಗಳೂ ಪ್ರಾಮುಖ್ಯವಾಗಿದೆ. ತಮ್ಮ ಆಡಳಿತೆಯನ್ನು ಮುಂದುವರಿಸಲಿಕ್ಕೆ, ಜನತೆಯ ಸ್ವಾತಂತ್ರ್ಯ ಚಳುವಳಿಯಲ್ಲಿ ಬಿರುಕುಂಟು ಮಾಡಲು ಬ್ರಿಟಿಷರು ಮುಸ್ಲಿಂ ಲೀಗ್ ಮತ್ತು ಅದರ ಅಧ್ಯಕ್ಷ ಮಹಮ್ಮದಾಲಿ ಜಿನ್ನಾ ಅವರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಹೋರಾಟದಲ್ಲಿ "ಕಾಂಗ್ರೆಸ್ ಲೀಗ್ ಒಂದಾಗಲಿ" "ಹಿಂದೂ ಮುಸಲ್ಮಾನರ ಐಕ್ಯತೆ ಸಾಧಿಸಲಿ" ಎಂಬ ಘೋಷಣೆ ಕೂಗುತ್ತಿದ್ದೆವು ನಾವು ಕಮ್ಯುನಿಸ್ಟ್ ಪಾರ್ಟಿಯವರು. ದೇಶದ ಸ್ವಾತಂತ್ರ್ಯಕ್ಕಾಗಿ ಎರಡೂ ಜಾತಿಗಳ ಐಕ್ಯತೆಯ ಅವಶ್ಯಕತೆಯ ಕೂಗು, ಹಿಂದೂ ಮುಸ್ಲಿಂ ದಂಗೆಯಾದಾಗ ನಮ್ಮ ಪಕ್ಷದ ಕಾರ್ಯಕರ್ತರ ಸಮರ್ಥನೀಯ ಮಧ್ಯಪ್ರವೇಶ ಸಾರ್ವಜನಿಕರಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಕುರಿತು ಒಳ್ಳೆ ಅಭಿಮಾನ ಉಂಟು ಮಾಡಿತ್ತು. ಮಹಾತ್ಮಾಗಾಂಧಿಯವರ ಅಹಿಂಸಾತ್ಮಕ ಚಳುವಳಿ, ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ರೈತರ ಕಾರ್ಮಿಕರ ಮಧ್ಯ ಪ್ರವೇಶದಿಂದಾಗಿಯೂ, ಅಹಿಂಸಾತ್ಮಕವಾದ ವೈಯಕ್ತಿಕ ಪ್ರತಿಭಟನೆಗಳಿಂದ ಬಲಿಷ್ಟವಾದ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಸೋಲಿಸಲು ಸಾಧ್ಯವಾಗದೆಂದು ತಿಳಿದ ದೇಶದ ಜನತೆ, ಎರಡನೇ ಮಹಾಯುದ್ಧದಲ್ಲಿ ಸೋವಿಯತ್ ಜನತೆಯ ಪರಾಕ್ರಮದಿಂದ ಸ್ಫೂರ್ತಿಗೊಂಡು ಹಿಂಸಾತ್ಮಕ ಚಳುವಳಿ ಪ್ರಾರಂಭಿಸಿದಾಗ ಬ್ರಿಟಿಷರು ದೇಶವನ್ನು ವಿಭಜಿಸಿ ಅಧಿಕಾರ ಹಸ್ತಾಂತರಿಸಿ ಹೋದರು. ಆಗ ಬ್ರಿಟಿಷರು ಹಿಂದೂ–ಮುಸಲ್ಮಾನರಲ್ಲಿ ನೇರವಾಗಿಯೇ ದ್ವೇಷ ಬೆಳೆಸುತ್ತಿದ್ದರು, ದಳ್ಳುರಿ ಹಚ್ಚುತ್ತಿದ್ದರು. ಈಗ ಬ್ರಿಟಿಷರು ಬಿಟ್ಟು ಹೋದ ಅವಶೇಷಗಳಿಗೆ ಅಧಿಕಾರ ಹಾಗೂ ಮತಗಳಿಕೆಯ ಅಮಿಷೆಯಿಂದ ಬಂಡವಾಳಶಾಹಿ ಪಕ್ಷಗಳು ಜಾತಿಯ ಶಕ್ತಿಗಳಿಗೆ ಬೆಂಬಲ ನೀಡುವುದು ಒಂದೆಡೆಯೊದರೆ, ಆರ್ಥಿಕ ಅಸಮಾನತೆ, ನಿರುದ್ಯೋಗ ಮೂಢನಂಬಿಕೆಗಳನ್ನೆಲ್ಲ ಉಪಯೋಗಿಸಿಕೊಂಡು ವಿದೇಶಿ ಸಾಮ್ರಾಜ್ಯಶಾಹಿಗಳ ಏಜಂಟರು ಹಿಂದೂ–ಮುಸ್ಲಿಂ ಪಂಥವಾದಿಗಳು, ಜಾತಿಯ ದುರಭಿಮಾನಿಗಳು ದೇಶದಲ್ಲಿ ಹಿಂದೂ-ಮುಸ್ಲಿಂ ಗಲಭೆಗಳಿಗೆ ಪ್ರಚೋದನೆ ನೀಡಿ, ಮುಖಂಡತ್ವ ಕೊಟ್ಟು ಜನಜೀವನ ಅಸ್ತವ್ಯಸ್ತ ಗೊಳಿಸುತ್ತಿದ್ದಾರೆ. ಜೀವ ಆಸ್ತಿ ನಾಶಕ್ಕೆ ಕಾರಣೀಭೂತರಾಗುತ್ತಿದ್ದಾರೆ.

ಈ ಜ್ವಲಂತ ಸಮಸ್ಯೆಯ ಕುರಿತು ಎಸ್.ಆರ್. ಭಟ್ ಅವರು "ಹಿಂದೂ ಮುಸ್ಲಿಂ ಘರ್ಷಣೆಗಳ ಸಮಸ್ಯೆ" ಎಂಬ ಪುಸ್ತಕ ಬರೆದಿದ್ದಾರೆ. ನವ ಕರ್ನಾಟಕ ಪ್ರಕಾಶನದವರಿಂದ ಪ್ರಕಟಿಸಲ್ಪಟ್ಟಿದೆ. 90 ಪುಟಗಳ ತಮ್ಮ ಹೊತ್ತಿಗೆಯಲ್ಲಿ ಎಸ್.ಆರ್. ಭಟ್ಟ ಅವರು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಹಾಗೂ ಸ್ವಾತಂತ್ರ್ಯ ಪಡೆದ ನಂತರ ಜಮಯತೇ ಇಸ್ಲಾಮಿ, ಆರ್.ಎಸ್.ಎಸ್. ಅಂದಿನ ಜನಸಂಘ, ಇಂದಿನ ಬಿ.ಜೆ.ಪಿ. ಮತ್ತು ಶಿವಸೇನೆಗಳು ಜಾತೀಯ ದ್ವೇಷ-ದಂಗೆಗಳಿಗೆ ಯಾವ ರೀತಿ ಕುಮ್ಮಕ್ಕು ನೀಡುತ್ತಿವೆಂಬುದನ್ನು ವಿವರಿಸಿದ್ದಾರೆ. ಆರ್.ಎಸ್.ಎಸ್. ಮತ್ತು ಜಮಾಯತೆ ಇಸ್ಲಾಮಿ ಮುಂಖಂಡರ ಭಾಷಣ, ಲೇಖನಗಳಲ್ಲಿಯ ಅಂಶಗಳನ್ನೂ ಉಲ್ಲೆಖಿಸಿದ್ದಾರೆ. ಇತ್ತೀಚಿಗೆ ನಡೆದ ಗಲಭೆಗಳನ್ನು ವಿಶ್ಲೇಷಿಸುತ್ತಾ "ಇಂಥ ಪ್ರತಿಯೊಂದು ಘರ್ಷಣೆಯೂ ಒಂದೊಂದು ದುರಂತ, ಭಾರತದ ಹೆಸರಿಗೆ ಒಂದೊಂದು ಕಲಂಕ" ಎಂದು ಸರಿಯಾಗಿಯೇ ಹೇಳಿ, "ಈ ರೀತಿಯ ದುರಂತಗಳಿಗೆ ಕೊನೆಯೆಂದು ? ಈ ಸಮಸ್ಯೆಗೆ ಶಾಶ್ವತ ಪರಿಹಾರವೇನು ? ಈ ಸಾಂಕ್ರಾಮಿಕ ಪಿಡುಗನ್ನು ಸಮೂಲಾಗ್ರವಾಗಿ ಉಚ್ಚಾಟಿಸುವ ಬಗೆ ಹೇಗೆ ? " ಎಂಬ ಪ್ರಶ್ನೆಗಳನ್ನೆತ್ತಿದ್ದಾರೆ.

ತಾವೇ ಈ ಪ್ರಶ್ನೆಗಳಿಗೆ ಉತ್ತರ ನೀಡುವಂತೆ 73ನೇ ಪುಟದಲ್ಲಿ "ನಿವಾರಣೋಪಾಯ" ಎಂಬ ತಲೆಬರಹದಲ್ಲಿ ಆರು ಸೂಚನೆಗಳನ್ನು ಮುಂದಿಟ್ಟಿದ್ದಾರೆ. ಅವಾವುವೆದಂರೆ-ಪ್ರಭುತ್ವ ಮತ್ತು ರಾಜಕಾರಣಗಳಿಂದ ಧರ್ಮವನ್ನು ಪ್ರತ್ಯೇಕಿಸಬೇಕು, ರೇಡಿಯೋ ಟಿ.ವಿ. ಮುಂತಾದ ಸರಕಾರಿ ಸಮೂಹ ಮಾಧ್ಯಮಗಳಲ್ಲಿ ಎಲ್ಲ ವಿಧದ ಧಾರ್ಮಿಕ ಪ್ರಚಾರಗಳನ್ನು ಗೊಡ್ಡು ಸಂಪ್ರದಾಯಗಳ ವೈಭವೀಕರಣಗಳನ್ನೂ ಸಂಪೂರ್ಣವಾಗಿ ಪ್ರತಿಬಂಧಿಸಬೇಕು, ನಮ್ಮ ಇತಿಹಾಸದ ಬಗ್ಗೆ ಜನರಲ್ಲಿ ಪ್ರಚಲಿತವಾಗಿರುವ ತಪ್ಪುತಿಳುವಳಿಕೆಗಳನ್ನು ಹೋಗಲಾಡಿಸಬೇಕು, ಮುಸ್ಲಿಮರ ಮತ್ತು ಇತರ ಅಲ್ಪ ಸಂಖ್ಯಾತರ ನೈಜ ಸಂಕಷ್ಟಗಳನ್ನೂ ಅನಾನುಕೂಲತೆಗಳನ್ನೂ ಬಗೆಹರಿಸಲು ಸೂಕ್ತ ಕ್ರಮಗಳನ್ನು ಸರ್ಕಾರ ಕೂಡಲೇ ಕೈಗೊಳ್ಳಬೇಕು, ಆರ್. ಎಸ್. ಎಸ್. ವಿಶ್ವ ಹಿಂದೂ ಪರಿಷತ್ ಜಮಾತೆ-ಇಸ್ಲಾಮಿ ಮೊದಲಾದ ಮತಾಂಧಸಂಘಟನೆಗಳ ವಿಷಪೂರಿತ ಪ್ರಚಾರ ಮತ್ತು ಚಟುವಟಿಕೆಗಳನ್ನು ಎದುರಿಸಲು ದೇಶದ ಎಲ್ಲಾ ವಿಚಾರಶೀಲರೂ ಮುಂದಾಗಬೇಕು, ಕೊನೆಯದಾಗಿ ಹಿಂದೂ ಮುಸ್ಲಿಂ ಸಮುದಾಯಗಳ ನಡುವೆ ವೈಮನಸ್ಸನ್ನು ಮೂಡಿಸುವಂತಹ ಅಹಿತಕರ ಘಟನೆಗಳು ಎಲ್ಲಾದರೂ ನಡೆದಾಗ ಅಥವಾ ವಿವಾದಗಳು ತಲೆದೋರಿದಾಗ ಸಂಭಂದ ಪಟ್ಟ ರಾಜ್ಯದ ಹಿರಿಯ ಅಧಿಕಾರಿಗಳು, ಸಚಿವರು ಕೂಡಲೇ ಸ್ಥಳಕ್ಕೆ ಧಾವಿಸಿ ಅವುಗಳ ಇತ್ಯರ್ಥ ಮಾಡಬೇಕು ಎಂದು ಹೇಳಿದ್ದಾರೆ.

ಈ ಸೂಚನೆಗಳನ್ನು ಮುಂದಿಡುತ್ತಾ "ಆದರೆ ಇಂದಿನ ಬಂಡವಾಳಶಾಹಿ ಸರಕಾರಗಳು, ರಾಜಕಾರಣಿಗಳು ಮತ್ತು ನಾಯಕರು ಇಂಥ ಕ್ರಮಗಳನ್ನು ಕೈಗೊಳ್ಳಬಹುದೆಂದು ಭಾವಿಸುವುದು ಅವಾಸ್ತವವಾದೀತು. ಏಕೆಂದರೆ ಕೋಮುವಾದವೆಂಬುದು ಅವರ ರಾಜಕೀಯ ಬಂಡವಾಳದ ಒಂದು ಭಾಗ. ಧರ್ಮ ಎಂಬುದು ಅವರ ಬತ್ತಳಿಕೆಯಲ್ಲಿರುವ ಅಸ್ತ್ರಗಳಲ್ಲಿ ಒಂದು" ಎಂದು ಎಸ್.ಆರ್. ಭಟ್ಟ ಅವರು ಹೇಳಿ "ಆದ ಕಾರಣ ದೇಶದ ಕಾರ್ಮಿಕ ವರ್ಗದ ಮೇಲೆ ಈ ವಿಷಯದಲ್ಲಿ ಹೆಚ್ಚಿನ ಜವಾಬ್ದಾರಿಯಿದೆ. ಈ ಜವಾಬ್ದಾರಿ

ಎನ್. ಕೆ. ಉಪಾಧ್ಯಾಯ

ಯನ್ನು ಪೂರೈಸಬೇಕಾದರೆ ಕಾರ್ಮಿಕ ವರ್ಗವು ಅರ್ಥವಾದದ ಬರಡು ಜಾಡಿನಿಂದ ತೊಲಗಿ, ಎಲ್ಲರಿಗೂ ವಿದ್ಯಾರ್ಜನೆಯ ಹಕ್ಕು, ಉದ್ಯೋಗದ ಹಕ್ಕು, ವಸತಿ ಸೌಕರ್ಯದ ಹಕ್ಕು, ... ದೇಶವನ್ನು ಸುಖಮಯವಾದ ಸಮೃದ್ಧಿಯ ಸುವರ್ಣಯುಗದತ್ತ ನಿಜವಾಗಿಯೂ ಕೊಂಡೊಯ್ಯ ಬಲ್ಲ ಏಕಮೇವ ವ್ಯವಸ್ಥೆಯಾದ ಸಮಾಜವಾದದ ಸ್ಥಾಪನೆಯ ಸ್ಫೂರ್ತಿಯುತವಾದ ಗುರಿಯನ್ನು ದೇಶದ ಮುಂದಿಟ್ಟು ಅದಕೋಸ್ಕರ ಸಕ್ರಿಯವಾಗಿ ಹೋರಾಡ ಬೇಕು" ಎಂದು ಗಂಭೀರವಾಗಿಯೇ ತಮ್ಮ ಮನದಾಳದಲ್ಲಿಯ ಅಭಿಲಾಷೆಯನ್ನು ತೋಡಿಕೊಂಡಿದ್ದಾರೆ. ಒಬ್ಬ ಮಾರ್ಕ್ಸಿಸ್ಟ್ ಬರಹಗಾರನಿಗೆ ಈ ಆರು ಪರಿಹಾರೋಪಾಯಗಳಿಂದಲೇ ಸಮಾಧಾನವೇ ? ಪ್ರಾರಂಭದಲ್ಲೇ ಲೇಖಕರು ಎತ್ತಿದ ಪ್ರಶ್ನೆಗಳಿಗೆ ಇದರಿಂದ ಮಾತ್ರ ಪರಿಹಾರ ಸಿಗಲು ಸಾಧ್ಯವೇ ?

ಎಸ್. ಆರ್. ಭಟ್ ಅವರು ನಿವಾರಣೋಪಾಯವನ್ನು ಸೂಚಿಸುವ ಮುಂಚೆ 'ಕಾರ್ಮಿಕ ವರ್ಗದ ನಿಷ್ಕ್ರಿಯತೆ' ಎಂಬ ಶಿರೋನಾಮೆಯಲ್ಲಿ"…. ಕಾರ್ಮಿಕವರ್ಗ ರಾಜಕೀಯ–ಸಾಮಾಜಿಕ ಪ್ರಶ್ನೆಗಳನ್ನು ಕಡೆಗಣಿಸಿದೆ. ಪ್ರಸ್ತುತ ಬಂಡವಾಳಶಾಹಿ ಆರ್ಥಿಕ–ಸಾಮಾಜಿಕ ವ್ಯವಸ್ಥೆಯನ್ನು ಕೊನೆಗಾಣಿಸಿ ಅದರ ಸ್ಥಾನದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸುವ ಭವ್ಯ ಹೊಣೆಗಾರಿಕೆಯನ್ನು ಇತಿಹಾಸ ತನ್ನ ಮೇಲೆ ಹೊರಿಸಿದೆ ಎಂಬ ಸರಳ ಸಂಗತಿಯನ್ನು ಕಾರ್ಮಿಕವರ್ಗ ತಾತ್ಕಾಲಿಕವಾಗಿ ಮರೆತಿದೆ…" ಎಂಬುದನ್ನೂ ಎತ್ತಿ ತೋರಿಸಿದ್ದಾರೆ. ಅದು ಸ್ವಾಗತಾರ್ಹ. ಆದರೆ ಹಿಂದೂ–ಮುಸ್ಲಿಂ ಘರ್ಷಣೆಗಳ ಸಮಸ್ಯೆಗೆ ಪರಿಹಾರ ಇವುಗಳೇ ಸಾಕೇ ? ನನ್ನ ಅಭಿಪ್ರಾಯದಲ್ಲಿ ಸಾಕಾಗುವುದಿಲ್ಲ. ಕಮ್ಯುನಿಸ್ಟ್ ಲೇಖಕರು ಇನ್ನೂ ಎರಡು ಅಂಶಗಳನ್ನು ಉಲ್ಲೇಖಿಸಬೇಕಾಗಿತ್ತು. ಒಂದು ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆ, ಎರಡು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಮಾಜವಾದಿ ಕ್ರಾಂತಿಯ ಅವಶ್ಯಕತೆ.

ಎಡಶಕ್ತಿಗಳು ಬಲಿಷ್ಟವಾಗಿರುವ ಪಶ್ಚಿಮ ಬಂಗಾಲ, ತ್ರಿಪುರ, ಕೇರಳಗಳಲ್ಲಿ ಮತೀಯ ಶಕ್ತಿಗಳಿಗೆ ತಲೆ ಎತ್ತಲು ಅವಕಾಶವಿಲ್ಲ. ಅವು ತಲೆ ಎತ್ತಿದರೂ ಮತೀಯ ಗಲಭೆಗಳಿಗೆ ಅವಕಾಶ ಸಿಗುತ್ತಿಲ್ಲ. ಕೇರಳದಲ್ಲಿ ಮುಸ್ಲಿಂಲೀಗ್ ಬಲಿಷ್ಟವಾಗಿದ್ದರೂ, ವಿದೇಶಿ ಮುಸ್ಲಿಂ ರಾಷ್ಟ್ರಗಳಿಂದ ಸಾಕಷ್ಟು ಹಣ ಬರುತ್ತಿದ್ದರೂ ಎಡ ಶಕ್ತಿಗಳ ಪ್ರಭಾವ ಜಾತೀಯ ಶಕ್ತಿಗಳ ಕುಚೋದ್ಯತನಕ್ಕೆ ಅಡ್ಡಿಯೊಡ್ಡುತ್ತಿವೆ. ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಎಡ ಶಕ್ತಿಗಳ ಮೇಲ್ಮೈಯಾಗಿದೆ. ಇತರ ಎಲ್ಲಾ ಬಂಡವಾಳಶಾಹಿ ಪಕ್ಷಗಳಿಂದ ಆಳಲ್ಪಡುವ ಇತರ (ಆಂದ್ರ, ಕರ್ನಾಟಕಗಳನ್ನೊಳಗೊಂಡು) ರಾಜ್ಯಗಳಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಮತೀಯ ಗಲಭೆಗಳು ಸಂಭವಿಸುತ್ತಿರುವಾಗ ಪ. ಬಂಗಾಲ, ತ್ರಿಪುರಗಳಲ್ಲಿ ಆ ಶಕ್ತಿಗಳಿಗೆ ಗಲಭೆ ಎಬ್ಬಿಸಲು ಯಾಕೆ ಸಾಧ್ಯವಾಗುತ್ತಿಲ್ಲ ? ಅಲ್ಲಿ ಸಿ ಪಿ ಐ (ಎಂ) ನೇತೃತ್ವದ ಎಡರಂಗ ಸರ್ಕಾರ ಧಾರ್ಮಿಕ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ, ರಾಜಕೀಯಕ್ಕಾಗಿ ಅವುಗಳನ್ನು ಉಪಯೋಗಿಸುತ್ತಿಲ್ಲ. ಎಡ ಮತ್ತು ಪ್ರಜಾಪ್ರಭುತ್ವ ರಂಗದ ಕಾರ್ಯಕ್ರಮವನ್ನು, ಸಮಾಜವಾದಿ ವಿಚಾರ ಧಾರೆಯನ್ನು, ಕಾರ್ಮಿಕ ಸಂಘಟನೆ, ರೈತಸಂಘ, ಮಹಿಳಾ ಸಂಘಟನೆ, ವಿದ್ಯಾರ್ಥಿ ಯುವಜನ ಸಂಘಟನೆಗಳ ಮೂಲಕ ಮನೆ ಮನೆಗೆ ತಲ್ಪಿಸುತ್ತಿದೆ. ಸಮಾಜವಾದಿ ವಿಚಾರ ಧಾರೆಯಲ್ಲಿ, ಸಮತಾವಾದಿ ಕ್ರಾಂತಿಯಲ್ಲಿ ವಿಶ್ವಾಸ ಹುಟ್ಟಿಸಲು ಬಲಿಷ್ಟವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ನಿರ್ಮಿಸುತ್ತಿದೆ.

"ಸಮಾಜವಾದದ ಸ್ಥಾಪನೆಯ ಸ್ಫೂರ್ತಿಯುತವಾದ ಗುರಿಯನ್ನು ದೇಶದ ಮುಂದಿಟ್ಟು ಅದಕ್ಕೋಸ್ಕರ ಸಕ್ರಿಯವಾಗಿ ಹೋರಾಡಬೇಕು" ಎಂದು ಎಸ್. ಆರ್. ಭಟ್ ಹೇಳಿದ್ದಾರೆ. ಅದಾಗಬೇಕಾದರೆ ಮಾರ್ಕ್ಸ್‌ವಾದ–ಲೆನಿನ್‌ವಾದ ಸಿದ್ಧಾಂತದ ತಳಹದಿಯಲ್ಲಿ ಕಾರ್ಮಿಕವರ್ಗದ ಬಲಿಷ್ಟವಾದ ಕಮ್ಯುನಿಸ್ಟ್ ಪಕ್ಷ ಬೆಳೆಯಬೇಕು. ಈಗಿನ ಸಾಮಾಜಿಕ ಪದ್ಧತಿ ನಶೆಯಾಗಬೇಕು, ಅದು ಕಮ್ಯುನಿಸ್ಟ್ ಪಕ್ಷದಿಂದಲೇ ಸಾಧ್ಯವೆಂಬ ತಿಳುವಳಿಕೆ ಜನರ ಮನದಲ್ಲಿ ಮೂಡಿ ಕಮ್ಯುನಿಸ್ಟ್ ಪಕ್ಷದ ಪ್ರತಿಯೊಂದು ಚಟುವಟಿಕೆಗಳಲ್ಲಿ, ಚಳುವಳಿಗಳಲ್ಲಿ ಕ್ರಾಂತಿಯಲ್ಲಿ ಅವರು ಸಹಭಾಗಿಗಳಾಗುವಂತೆ, ಬೆಂಬಲ ತೋರಿಸುವಂತಾಗಬೇಕು. ಈ ಅಂಶ ಓದುಗರ ಮನಸ್ಸಿನಲ್ಲಿ ಮನದಟ್ಟಾಗುವುದು ಅತ್ಯಗತ್ಯ. ಆ ದಿಸೆಯಲ್ಲಿ ಈ ಅಂಶ ಪುಸ್ತಕದಲ್ಲಿ ಉಲ್ಲೇಖಿಸಲ್ಪಡುತ್ತಿದ್ದರೆ ಒಳ್ಳೆಯದಾಗುತ್ತಿತ್ತು. ಹಿಂದು ಆಗಲಿ ಮುಸಲ್ಮಾನನಾಗಲಿ–ಜನರು ಎದುರಿಸುತ್ತಿರುವ ಸಮಸ್ಯೆಗಳಿಗೆ ಬಂಡವಾಳಶಾಹಿ ಪಕ್ಷಗಳಿಂದಾಗಲೀ, ಮೂಲಭೂತವಾದಿ ಜಾತಿಯ ಸಂಘಟನೆಗಳಿಂದಾಗಲೀ ಪರಿಹಾರ ಸಿಗಲು ಸಾಧ್ಯವಿಲ್ಲ. ಅದು ಎಡರಂಗ ಬಲಗೊಳಿಸುವುದರಿಂದ, ಕ್ರಾಂತಿ ಮಾಡುವುದರಿಂದಲೇ ಸಾಧ್ಯ. ಭಾರತ ದೇಶ ಮತ್ತೊಮ್ಮೆ ಜಾತಿ ಆಧಾರದಲ್ಲಿ ವಿಭಜಿಸಲ್ಪಡುವುದಿಲ್ಲ. ಹಿಂದೂ-ಮುಸಲ್ಮಾನರು ಅಷ್ಟೇ ಏಕೆ ಎಲ್ಲಾ ಧರ್ಮ-ಜಾತಿಯವರೂ ಭಾರತ ದೇಶದಲ್ಲಿ ಒಟ್ಟಿಗೆ ಜೀವನ ನಡೆಸಬೇಕಾಗಿರುವುದು ವಾಸ್ತವ ಸಂಗತಿ. ಜನರ ಆಶೋತ್ತರಗಳನ್ನು ಪಡೆಯಲು ಸಮತಾವಾದದಿಂದ ಮಾತ್ರ ಸಾಧ್ಯವಲ್ಲದೆ, ಜಾತಿಯ ಸಂಘಟನೆಗಳಿಂದಾಗಲೀ ಬಂಡವಾಳಶಾಹಿ ಪಕ್ಷಗಳಿಂದಾಗಲೀ ಸಾಧ್ಯವಿಲ್ಲ. ಆದ್ದರಿಂದ ಎಡಶಕ್ತಿಗಳ ಅದರಲ್ಲೂ ಕಾರ್ಮಿಕವರ್ಗದ ಮುಖಂಡತ್ವದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲಿಷ್ಟವಾಗಿ ಬೆಳೆಯುವುದು ಅತ್ಯಗತ್ಯ.

ಎಸ್. ಆರ್. ಭಟ್ಟ ಅವರು ತಮ್ಮ ಪುಸ್ತಕದಲ್ಲಿ ಹಿಂದೂ – ಮುಸ್ಲಿಮ್ ದೊರೆಗಳ ಆಡಳಿತೆಯ ವೈಖರಿಯನ್ನು ವಿವರಿಸಿದ್ದಾರೆ. ಇತಿಹಾಸದ ಕುರಿತು ಎಂಥ ತಪ್ಪು ಅಭಿಪ್ರಾಯಗಳನ್ನು ಮೂಡಿಸುತ್ತಿದ್ದಾರೆಂಬುದನ್ನೂ ವಿವರಿಸಿದ್ದಾರೆ. ಅದರ ಪರಿಣಾಮವೇ ಇಂದಿನ ಮತೀಯ ದ್ವೇಷಕ್ಕೆ ಕಾರಣವೆಂಬುದನ್ನೂ ಉದಾಹರಣೆ ಸಹಿಸಿ ವಿವರಿಸಿದ್ದಾರೆ. ಹಾಗೆಯೇ ಕೊನೆಯಲ್ಲಿ ಹಿಂದು ಸಮಾಜಕ್ಕೆ ಬುದ್ಧಿ ಹೇಳುವ ರೀತಿಯಲ್ಲಿ ತಮ್ಮ "ಅನುಬಂಧ"ದಲ್ಲಿ ಹಿಂದೂ ಧರ್ಮದಲ್ಲಿ ಗೋವು–ಸತ್ಯ ಮಿಥ್ಯ"ದ ಮೂಲಕ ಋಗ್ವೇದ, ಪೂರ್ವೋಕ್ತ ಕೃತಿ, ಮನುಸ್ಮೃತಿ ಹಾಗೆಯೇ ಇತರ ಪುಸ್ತಕಗಳಿಂದ ಉದಾಹರಣೆಗಳನ್ನು ಹೆಕ್ಕಿ ತೆಗೆದು ತೋರಿಸಿದ್ದಾರೆ.

ಲೇಖಕರು ಪುಸ್ತಿಕೆಯ 7ನೇ ಪುಟದಲ್ಲಿ 1971 ರಿಂದ 1977 ರವರೆಗೆ ಇಂದಿರಾ ಗಾಂಧಿಯ ಆಳಿಕೆಯ ಆಡಳಿತೆಯನ್ನು ಉಲ್ಲೇಖಿಸುತ್ತಾ, ಆ ಕಾಲದಲ್ಲಿ "ಹಿಂದೂ–ಮುಸ್ಲಿಂ ಘರ್ಷಣೆಗಳು ಮತ್ತೊಮ್ಮೆ ಇಳಿಮುಖವಾದವು. 1975 ರಲ್ಲಿ ತುರ್ತುಪರಿಸ್ಥಿತಿ ಜಾರಿಯಾಗಿ ಆರ್. ಎಸ್. ಎಸ್. ಮತ್ತು

[8ನೇ ಪುಟನೋಡಿ]

ಎಸ್. ಎಫ್. ಐ. ಕರೆ

ಗುತ್ತಿಗೆ ಶಿಕ್ಷಕರನ್ನು ಖಾಯಂಗೊಳಿಸಿರಿ

ದಿ. 7-1-1986 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ರಾಜ್ಯ ಕಾರ್ಯದರ್ಶಿ ಮಂಡಳಿಯು– ಗುತ್ತಿಗೆ ಶಿಕ್ಷಕರ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ಸೂಚಿಸಿದೆ. ಸರ್ಕಾರವು ಏಕ ಪಕ್ಷೀಯವಾಗಿ 189 ಗುತ್ತಿಗೆ ಶಿಕ್ಷಕರನ್ನು ಸೇವೆಯಿಂದ ವಜಾ ಮಾಡಿರುವ ಕ್ರಮವನ್ನು ಎಸ್. ಎಫ್. ಐ ತೀವ್ರವಾಗಿ ಖಂಡಿಸಿದೆ. ರಾಜ್ಯಾದ್ಯಂತ ಕಳೆದ 5–3 ವರ್ಷಗಳಿಂದ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ಗುತ್ತಿಗೆ ಶಿಕ್ಷಕರನ್ನು ಸೇವೆಯಿಂದ ವಜಾ ಮಾಡದೆ ಖಾಯಂಗೊಳಿಸಬೇಕೆಂದು ಎಸ್.ಎಫ್.ಐ ರಾಜ್ಯ ಸರಕಾರವನ್ನು ಒತ್ತಾಯ ಪಡಿಸಿದೆ.

ಬಹಿಷ್ಕಾರದ ಕರೆಯ ಖಂಡನೆ

ಕೆಲವು ಮುಸ್ಲಿಂ ಮುಖಂಡರು "ಗಣ ರಾಜ್ಯೋತ್ಸವ ದಿನವನ್ನು" ಬಹಿಷ್ಕರಿಸಲು ನೀಡಿರುವ ಕರೆಯನ್ನು ಎಸ್.ಎಫ್. ಐ. ತೀವ್ರವಾಗಿ ಖಂಡಿಸಿದೆ. ಈ ಬಹಿಷ್ಕಾರದ ಕರೆಯು ಈಗ ರಾಷ್ಟ್ರದಲ್ಲಿರುವ ಗೊಂದಲಮಯ ವಾತಾವರಣವನ್ನು ಇನ್ನಷ್ಟು ಕಲುಷಿತಗೊಳಿಸಲಿದೆ ಮಾತ್ರವಲ್ಲ ಪ್ರತ್ಯೇಕತಾವಾದಿ ಶಕ್ತಿಗಳ ದೇಶದ್ರೋಹಿ ಕೆಲಸಕ್ಕೆ ಇನ್ನಷ್ಟು ಇಂಬು ಕೊಡಲಿದೆ. ಆದ್ದರಿಂದ ದೇಶಪ್ರೇಮಿ ಮುಸ್ಲಿಂ ಸಮುದಾಯ ಒಕ್ಕೊರಳಿನಿಂದ ಈ ಬಹಿಷ್ಕಾರದ ಕರೆಯನ್ನು ಧಿಕ್ಕರಿಸಲು ಎಸ್. ಎಫ್. ಐ. ಕರೆ ನೀಡಿದೆ.

ಸುವರ್ಣ ಮಹೋತ್ಸವ :

ಭಾರತದ ಸಂಘಟಿತ ವಿದ್ಯಾರ್ಥಿ ಚಳುವಳಿಯ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಲಾಗಿದ್ದು, ಈ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿಮುಂದಾಳುಗಳನ್ನು ಸನ್ಮಾನಿಸಲು ತೀರ್ಮಾನಿಸಲಾಯಿತು.

ರಾಜ್ಯದ ವಿಶ್ವ ವಿದ್ಯಾನಿಲಯಗಳ ಸೆನೆಟ್‌ಗಳಲ್ಲಿ ವಿದ್ಯಾರ್ಥಿಪ್ರಾತಿನಿಧ್ಯಕ್ಕೆ ಚುನಾವಣೆ ನಡೆಸುವಲ್ಲಿ ಸರಕಾರದ ವಿಳಂಬ ನೀತಿಯನ್ನು ಖಂಡಿಸಿರುವ ಎಸ್. ಎಫ್. ಐ. ಕೂಡಲೇ ಚುನಾವಣೆ ನಡೆಸಲು ಒತ್ತಾಯ ಪಡಿಸಿದೆ.

ಕೇರಳ ಶಿಕ್ಷಕರ ಜಿಲ್ಲಾ ಸಮ್ಮೇಳನ

ಕೇರಳ ಸರ್ಕಾರಿ ಅಧ್ಯಾಪಕರ ಸಂಘದ (ಕೆ.ಜಿ.ಟಿ.ಎ) ಕಾಸರಗೋಡು ಜಿಲ್ಲಾ ಸಮ್ಮೇಳನವು ಮತ್ತು ಕುಂಬಳೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ನಡೆಯಿತು. ಜಿಲ್ಲಾ ಅಧ್ಯಕ್ಷ ಶ್ರೀ ಕುಂಞ್‌ಕೃಷ್ಣನ್ ನಾಯರ್ ಧ್ವಜಾರೋಹಣ ನಡೆಸಿ ಹುತಾತ್ಮರ ಸ್ಮರಣೆ ಮಾಡಿದರು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎ. ನಾರಾಯಣ ವೈದ್ಯ ಸ್ವಾಗತಿಸಿದರು. ಸಂಘದ ರಾಜ್ಯ ಅಧ್ಯಕ್ಷ ಕಾಂ. ಆರ್. ಎನ್. ಮನಲಿ ಸಮ್ಮೇಳನವನ್ನು ಉದ್ಘಾಟಿಸಿದರು. ಅನೇಕ ಸೋದರ ಸಂಘಟನೆಗಳ ಪ್ರತಿನಿಧಿಗಳು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

ಅದೇ ದಿನ ಸಂಜೆ ಸಾರ್ವಜನಿಕ ಸಭೆ ನಡೆಯಿತು. ಸಿ.ಪಿ.ಐ.(ಎಂ)ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾ. ಪಿ. ರಾಮಚಂದ್ರರಾವ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಮ್ಮೇಳನವು ಕೆಳಕಂಡ ನೂತನ ಜಿಲ್ಲಾಸಮಿತಿ ಪದಾಧಿಕಾರಿಗಳನ್ನು ಚುನಾಯಿಸಿದೆ.

ಕಾ. ಕೆ. ಕುಞ್‌ಕೃಷ್ಣನ್‌ನಾಯರ್ ಅಧ್ಯಕ್ಷರು- ಕಾ. ವಿ. ಅಪ್ಪಮುತ್ತು ಕಾ. ಸಿ. ಜನಾರ್ಧನ ನಂಬಿಯಾರ್ ಉಪಾಧ್ಯಕ್ಷರು, ಕಾ ಎ. ಮಾಧವನ್ ಕಾರ್ಯದರ್ಶಿ, ಕಾ. ಕೆ. ಎಸ್.ಗೋಪಿನಾಥನ್ ಮತ್ತು ಕಾ. ಪಿ. ನಾರಾಯಣನ್ ಜೊತೆ ಕಾರ್ಯದರ್ಶಿಗಳು, ಕಾ. ಕೆ. ಕಣ್ಣನ್ ಖಜಾಂಚಿ,ಅಲ್ಲದೆ 27 ಮಂದಿ ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ಮತ್ತು 6 ಮಂದಿ ಸದಸ್ಯರ ಮಹಿಳಾ ಸಮಿತಿಯನ್ನು ಅವಿರೋಧವಾಗಿ ಚುನಾಯಿಸಲಾಗಿದೆ.

[1ನೇ ಪುಟದಿಂದ]

ದಿಂದ ಚಟುವಟಿಕೆ ನಡೆಸುತ್ತಿದೆ. ಈ ರೀತಿ ನುಸುಳಿ ಬರುವುದನ್ನು ತಪ್ಪಿಸಲು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಗಡಿ ಭದ್ರತಾ ಪಡೆಗಳನ್ನು ಒದಗಿಸಲಿದೆ.

ಗೂರ್ಖಾಲ್ಯಾಂಡ್– ಕೇಂದ್ರದ ನಿಲುವು

ಗುರ್ಖಾಲ್ಯಾಂಡ್ ಚಳುವಳಿಯ ಕುರಿತು ಕಾಂಗ್ರೆ ಮತ್ತು ಕೇಂದ್ರ ಸರ್ಕಾರದ ನಿಲುವು ರಾಜಕೀಯ ಪರಿಹಾರ ಕಂಡುಹಿಡಿಯಲಿಕ್ಕೆ ಸಹಾಯಕವಾಗುತ್ತಿಲ್ಲೆಂದೂ. ನಿರಪರಾಧಿ ಜನರನ್ನು ಕೊಲ್ಲುವ ಶಕ್ತಿಗಳಿಗೆ ಅದು ಸಹಾಯಕವಾಗುತ್ತಿದೆಂದೂ ಪಿ. ಬಿ. ಆತಂಕ ವ್ಯಕ್ತಮಾಡಿದೆ. ಕೇಂದ್ರ ಸರ್ಕಾರ ಪಶ್ಚಿಮ ಬಂಗಾಲದ ಸರ್ಕಾರದೊಡನೆ ಸೇರಿ ಸುಭಾಷ್ ಗೈಸಿಂಗನ ನೇತೃತ್ವದಲ್ಲಿ ನಡೆಯುತ್ತಿರುವ ಭಯೋತ್ಪಾದಕರ ಚಟುವಟಿಕೆಗಳನ್ನು ತಡೆಯಲು ಸಹಕರಿಸಬೇಕೆಂದೂ ಕೇಳಿಕೊಂಡಿದೆ.

ಗೋವ–ಆಡಳಿತದ ಹೊಸ ಪ್ರದೇಶ

ಭಿನ್ನಾಭಿಪ್ರಾಯ, ಜಗಳ ಈಗ ಗೋವ ಪ್ರದೇಶವನ್ನೂ ಆವರಿಸಿರುವುದಕ್ಕೆ ಪಿ. ಬಿ. ತನ್ನ ಚಿಂತೆ ವ್ಯಕ್ತ ಮಾಡಿದೆ. ಗೋವೆಯಲ್ಲಿ ಸರ್ಕಾರಿ ಭಾಷೆಯಾವದಿರಬೇಕೆಂಬುದರ ಕುರಿತು ಜನರಲ್ಲಿ ಹಾಗೆಯೇ ಆಳುವ ಪಕ್ಷದ ಮುಖಂಡರಲ್ಲಿ ಭಿನ್ನಾಭಿಪ್ರಾಯಗಳಿವೆ. ಆಳುವಪಕ್ಷದಸಂದರ್ಭಸಾಧಕತನಮತ್ತೆ ಪರಿಸ್ಥಿತಿಯನ್ನುಹದಗೆಡಿಸಿ ಹಿಂಸಾತ್ಮಕ ಘಟನೆಗಳಿಗೆ ಅವಕಾಶ ಮಾಡಿಕೊಟ್ಟಿದೆ.

ಶಿಕ್ಷಣ ಹಾಗೂ ಆಡಳಿತೆಯಲ್ಲಿ ತಮ್ಮ ಮಾತೃಭಾಷೆಯನ್ನು ಉಪಯೋಗಿಸುವ ಹಕ್ಕು ಪ್ರತಿಯೊಂದು ಭಾಷಿಕ ಗುಂಪಿಗಿದೆಂಬ ತತ್ವವನ್ನು ಸಿ ಪಿ ಐ [ಎಂ] ಯಾವಾಗಲೂ ಒಪ್ಪಿಕೊಂಡಿದೆ. ಆದ್ದರಿಂದ ಗೋವೆಯಲ್ಲಿ ಕೊಂಕಣಿ ಮತ್ತು ಮರಾಠಿ ಮಾತಾಡುವ ಭಾಷಿಕರಹಕ್ಕಿಗೆ ಮಾನ್ಯತೆ ನೀಡಬೇಕೆಂದು ಪಿ. ಬಿ. ಅಭಿಪ್ರಾಯಪಟ್ಟಿದೆ.

[7ನೇ ಪುಟದಿಂದ]

ಜಮಾತೆ ಇಸ್ಲಾಂ – ಇವೆರಡರ ನಾಯಕರೂ ಪ್ರಮುಖ ಕಾರ್ಯಕರ್ತರೂ ಜೈಲು ಸೇರಿದರು. ಈ ಸನ್ನಿವೇಶದಲ್ಲಿ ಕೋಮು ಗಲಭೆಗಳಿಗೆ ಹೆಚ್ಚಿನ ಆಸ್ಪದವಿರಲಿಲ್ಲ" ಎಂದು ಹೇಳಿದ್ದಾರೆ. ಜಾತೀಯವಾದಿಗಳ ಬಂಧನ ಹಾಗೂ ಇಂದಿರಾಗಾಂಧಿಯವರ "ಹುಸಿ ಆಶಾವಾದ" ದಿಂದಾಗಿ ಜಾತೀಯ ಗಲಭೆಗಳು ನಡೆಯಲಿಲ್ಲೆಂಬ ತಿಳುವಳಿಕೆ ಕಮ್ಯುನಿಸ್ಟರಲ್ಲಿದ್ದರೆ,ಜನರಲ್ಲಿ ಅಂಥ ಭಾವನೆ ಮೂಡಿಸಿದರೆ, ಎಡಶಕ್ತಿಗಳ, ಮಾರ್ಕ್ಸ್‌ವಾದ–ಲೆನಿನ್‌ವಾದದ ಹಾಗೆಯೇ ಸಮತಾವಾದಿ ಕ್ರಾಂತಿಯ ಬೇರನ್ನೇ ಕಿತ್ತೊಗೆದಂತಾಗುತ್ತದೆ. ನೆಹರೂರವರನ್ನು ಹಿಡಿದು ಇಂದಿರಾ ಗಾಂಧಿ, ಈಗ ರಾಜೀವ ಗಾಂಧಿ ತಮ್ಮ ಅಧಿಕಾರ ಭದ್ರತೆಗಾಗಿ ಮತೀಯ ಶಕ್ತಿಗಳನ್ನೇ ಅವಲಂಬಿಸಿಲ್ಲವೇ ? ಬರೀ ಆಶ್ವಾಸನೆಗಳು, ಆಶಾವಾದಗಳು ಅಥವಾ ಜಾತೀಯ ಶಕ್ತಿಗಳ ಬಂಧನದಿಂದಲೇ ಹಿಂದೂ-ಮುಸ್ಲಿಂ, ಹಾಗೆಯೇ ಇತರ ಜಾತೀಯ ದಂಗೆಗಳನ್ನು ತಡೆಗಟ್ಟಲು ಸಾಧ್ಯವೇ. ಲೇಖಕರ ಈ ವಿಚಾರ ಸರಿಯಲ್ಲ. ಏಕ ವ್ಯಕ್ತಿ ಸರ್ವಾಧಿಕಾರ, ತುರ್ತು ಪರಿಸ್ಥಿತಿ, ಮತೀಯ ಶಕ್ತಿಗಳ ಬಂಧನ ಜಾತೀಯ ಗಲಭೆಗಳಿಗೆ ಪರಿಹಾರ ಒದಗಿಸುವುದಾದರೆ ಅಂಥ ಕ್ರಮ ಅನುಸರಿಸಿ ಈ ಪ್ರಶ್ನೆ ಬಗೆಹರಿಸಬಹುದೆಂಬ ವಿಚಾರ ಲೇಖಕರದ್ದಾಗಿಯೇ ? ಹಾಗಾದ್ದಲ್ಲಿ ಮಾರ್ಕ್ಸ್‌ವಾದಕ್ಕೆ ತಣ್ಣೀರೆರಚಿದಂತಲ್ಲವೇ ?

ಈ ಪುಸ್ತಕ ಬರೆಯಲು ಎಸ್. ಆರ್. ಭಟ್ಟ ಪರಿಶ್ರಮಿಸಿದ್ದಾರೆ. ಹಲವಾರು ಅಂಶಗಳನ್ನು ಓದುಗರ ಮುಂದಿಟ್ಟಿದ್ದಾರೆ. ಹಿಂದೂ - ಮುಸ್ಲಿಂ ಎರಡೂ ಜಾತಿಯವರಿಗೆ ವಿಚಾರಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಎಲ್ಲರೂ ಓದಿ ಅಭ್ಯೈಸಿಕೊಳ್ಳಲು ಅಭ್ಯಂತರವಿಲ್ಲ. ಪುಸ್ತಕದ ಬೆಲೆ ರೂ 6/–

ಈ ವಾರ....

ಜಗತ್ತಿನಲ್ಲಿ

- ಜಾಫ್ನಾದಲ್ಲಿ ಶ್ರೀಲಂಕ ಸರ್ಕಾರದ ದಿಗ್ಬಂಧನ, ಹೆಲಿಕ್ಯಾಪ್ಟರ್‌ಗಳ ಮೂಲಕ ರಾಕೆಟ್ ದಾಳಿ, ಭಾರೀ ಕದನ–ಸಾವು–ನೋವು ಮುಂದುವರಿಕೆ
- ಶ್ರೀಲಂಕಾ ಸರ್ಕಾರದ ಮಿಲಿಟರಿ ಕ್ರಾಯಾಚರಣೆಯಲ್ಲಿ ಅಮೆರಿಕನ್ ಕೂಲಿ ಸೈನಿಕರ ಪಾತ್ರದ ವರದಿ–ಭಾರತದ ಆತಂಕ
- ಅಮೆರಿಕಾದ ಸಂಸತ್ತಿನ ನಿಷೇಧವನ್ನು ಉಲ್ಲಂಘಿಸಿ ನಿಕಾರಾಗುವಾದ ವಿರುದ್ಧ ಕಾಂಟ್ರಾಗಳಿಗೆ ಸಿ. ಐ. ಎ. ನೆರವು ಮುಂದುವರಿಕೆ
- ಅಫಘಾನಿಸ್ತಾನದಲ್ಲಿ ಒಬ್ಬ ಪ್ರಮುಖ ಬಂಡುಕೋರ ಮುಖಂಡ ಹಾಗೂ ಆತನ ಒಂದು ಸಾವಿರ ಬೆಂಬಲಿಗರು ಸರ್ಕಾರಕ್ಕೆ ಶರಣು–ಜ. 8.
- ದಕ್ಷಿಣ ಆಫ್ರಿಕಾದ್ಯಂತ ಆಫ್ರಿಕಾ ನ್ಯಾಶನಲ್ ಕಾಂಗ್ರೆಸ್‌ನ 75ನೇ ಜಯಂತಿ ಆಚರಣೆ-ಜ. 8.
- ಬ್ರಿಟನ್ನಿನ ಸಾರ್ವಜನಿಕ ವಲಯದ ಬ್ರಿಟನ್ ಟೆಲಿಕೊವರ್ ಹಾಗೂ ಬ್ರಿಟನ್ ಗ್ಯಾಸ್ ಕಂಪೆನಿಗಳನ್ನು ಖಾಸಗಿಯವರಿಗೆ ಈಗಾಗಲೇ ಮಾರಿರುವ ಥ್ಯಾಚರ್ ಸರ್ಕಾರ ಜಗತ್ತಿನ ಅತೀ ದೊಡ್ಡ ಪ್ರಯಾಣಿಕ ವಿಮಾನ ಸಂಸ್ಥೆ ಬ್ರಿಟಿಶ್ ಏರ್‌ಲೈನ್ಸನ್ನು ಖಾಸಗಿಯವರಿಗೆ ಮಾರಲು ಸರ್ವಸಿದ್ಧತೆಯಾಗಿದೆ-ಜ. 10.

ದೇಶದಲ್ಲಿ

- ಅಬಕಾರೀ ಸುಂಕ ಉಲ್ಲಂಘನೆಯ ವಿಷಯದಲ್ಲಿ ದೊಡ್ಡ ಉದ್ಯಮಿ ಕಿರ್ಲೋಸ್ಕರ್ ವಿರುದ್ಧ ಮೊಕದ್ದಮೆ ವಿಚಾರಣೆಗೆ ಅವಕಾಶವಿದೆಯೆಂದು ಮಹಾರಾಷ್ಟ್ರ ಹೈಕೋರ್ಟ್- ಜ.7.
- ನವಂಬರ್ ತಿಂಗಳ ಜೀವನವೆಚ್ಚ ಸೂಚ್ಯಂಕ 692. ಇತ್ತೀಚಿಗಿನ ಅತೀ ಹೆಚ್ಚು ಹಣದುಬ್ಬರ- 9.8%-ಜ.8.
- ಪಂಜಾಬಿನಲ್ಲಿ ವಿವಿದೆಡೆ ಭಯೋತ್ಪಾದಕರಿಂದ ಕೊಲೆ, ಸುಲಿಗೆ ಮುಂದುವರಿಕೆ. ಜ. 10 ರಂದು ವಿಶೇಷ ಡ್ಯೂಟಿ [ಜೈಲುಗಳು] ಪೋಲಿಸ್ ಅಧಿಕಾರಿ ಟಿ. ಸಿ. ಕಟೋಚ್ ಕೊಲೆ.
- ಸಾರ್ವಜನಿಕ ವಲಯಗಳಲ್ಲಿ "ಸುವರ್ಣ ಹಸ್ತ ಲಾಘವ" ಜ್ಯಾರಿಗೆ ತರಲು ಸರ್ಕಾರದ ತೀವ್ರ ಮುತುವರ್ಜಿಯ ಬಗ್ಗೆ ಕೇಂದ್ರ ಮಂತ್ರಿ ತ್ರಿಪಾಠಿ ಹೇಳಿಕೆ-ಜ.11.
- ರಿಝರ್ವ್‌ಬ್ಯಾಂಕಿನ 1985-86ರ ವರದಿ ಪ್ರಕಾರ ರೂಪಾಯಿಯ ಮೌಲ್ಯ ಇಳಿತದಿಂದಾಗಿ ಐ. ಎಂ. ಎಫ್. ನಿಂದ ಭಾರತ ಪಡೆದ ಸಾಲ 396.65 ಕೋಟಿ ಎಸ್. ಡಿ. ಆರ್. ಗಳಿಂದ 376.68 ಕೋಟಿಗೆ ಇಳಿದಿದ್ದರೂ ನಮ್ಮ ರೂಪಾಯಿ ಪ್ರಕಾರ ಅದು 4887 ಕೋಟಿಯಿಂದ 5285 ಕೋಟಿಗೆ ಏರಿದೆ.
- ಗೋವಾ ಕಾಂಗ್ರೆಸ್ (ಐ)ನ ಹಲವಾರು ದಿನಗಳ ಆಂತರಿಕ ಜಗ್ಗಾಟದ ನಂತರ ನಾಲ್ವರು ಮಂತ್ರಿಗಳ ರಾಜಿನಾಮೆ ವಾಪಾಸ್-ಜ. 12.

ರಾಜ್ಯದಲ್ಲಿ

- 1986-87ರ ರಾಜ್ಯದ ವಾರ್ಷಿಕ ಯೋಜನೆಗೆ ರಾಜ್ಯ ಸರ್ಕಾರದ ಕೇಳಿಕೆಗಿಂತ 50 ಕೋಟಿ ರೂ. ಕಮ್ಮಿ 870 ಕೋಟಿ ರೂ. ಗಳಿಗೆ ಅಸ್ತು-ಜ.10.
- ಕೊಳ್ಳೇಗಾಲ ಹಾಗೂ ಗೌರಿಬಿದನೂರು ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರುವ ಸರ್ಕಾರದ ನಿರ್ಧಾರದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ಸಕ್ಕರೆ ಕಾರ್ಮಿಕರ ಒತ್ತಾಯ.
- ತನ್ನ ನೌಕರರ ವೇತನ ಕುರಿತಾದ ಮೂರನೇ ವೇತನ ಆಯೋಗದ ಶಿಫಾರಸುಗಳಿಗೆ ಸರ್ಕಾರದ ಒಪ್ಪಿಗೆ.
- ಮಹಿಷಿ ಸಮಿತಿ ತನ್ನ ವರದಿಯನ್ನು ಕೂಡಲೇ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಬಗ್ಗೆ ಮುಖ್ಯಮಂತ್ರಿ ಆಕ್ಷೇಪಣೆ-ಜ.12.

Printed & Published by P. Ramachandra Rao on behalf of the Communist Party of India [Marxist] Karnataka State Committee,
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N. K. Upadhyaya